Mr. DEPUTY SPEAKER.—The question is :

"That clauses 2 to 4 both inclusive stand part of the Bill."

The motion was adopted.

Clauses 2 to 4 were added to the Bill.

Mr. DEPUTY SPEAKER.—The question is :

"That clause 1, the title and the preamble stand part of the Bill."

The motion was adopted.

Clause 1, the title and the preamble were added to the Bill.

Motion to pass.

Sri K. PUTTASWAMY.—Sir, I beg to move :

"That the Mysore State Legislature Proceedings (Protection of Publication) Bill, 1966, as passed by the Legislative Council be passed."

Mr. DEPUTY SPEAKER.—The question is :

"That the Mysore State Legislature Proceedings (Protection of Publication) Bill, 1966, as passed by the Legislative Council, be passed."

The motion was adopted

MYSORE AGRICULTURAL PESTS AND DISEASES BILL, 1967 AS REPORTED BY THE JOINT SELECT COMMITTEE.

(*Motion to Consider*)

Sri D. B. PAWAR (Deputy Minister for Agriculture).—Sir I beg to move :

"That the Mysore Agricultural Pests and Diseases Bill, 1967, as reported by the Joint Select Committee, be taken into consideration."

Mr. DEPUTY SPEAKER.—Motion moved :

"That the Mysore Agricultural Pests and Diseases Bill, 1967, as reported by the Joint Select Committee, be taken into consideration."

Sri D. B. PAWAR.—Sir, this Bill was introduced in this House on 5th July 1967 and after debating over this Bill, the House thought that on account of certain coercive measures adopted in this Bill, this Bill be referred to a Joint Select Committee. The motion for getting the concurrence of the Legislative Council to refer the Bill to a Joint Select Committee was passed by this House on 2nd August 1967. The Legislative Council agreed with the proposal on 4th August 1968 and accordingly the Bill was referred to a Joint Select Committee consisting of 12 members of this House and 4 members of the Upper House.

After due consideration of this Bill, the Joint Select Committee has suggested a few amendments, specially amendments to clauses 8, 12, 13, 14 and 18. These are the five amendments proposed by the Joint Select Committee and the report of the Joint Select Commettee is placed before the House. I request the members to take this report into consideration.

4-30 P.M.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).— ಮಾನ್ಯ ಸಭಾಪತಿಗಳೇ...

Mr. DEPUTY SPEAKER.—The hon'ble Member may move his amendment and then speak.

Sri H. N. NANJE GOWDA.—Sir, I move:

> "That the Mysore Agricultural Pests and Diseases Bill, 1967, be recommitted to the same Joint Select Committee."

Mr. DEPUTY SPEAKER.—Amendment moved:

> "That the Mysore Agricultural Pests and Diseases Bill, 1967, be recommitted to the same Joint Select Committee."

†ಶ್ರೀ ಎಚ್. ಎನ್. ನಂಜೇಗೌಡ.—ತಾತ್ವಿಕವಾಗಿ ನಮ್ಮ ರಾಜ್ಯದ ವ್ಯವಸಾಯ ಕ್ಷೇತ್ರದಲ್ಲಿ ಇಂತಹ ಒಂದು ಕಾನೂನು ಅವಶ್ಯ ಎಂದು ನಾನು ಒಪ್ಪಿಕೊಂಡರೂ ಕೂಡ ಈಗ ಇದನ್ನು ಇಟ್ಟಿರತಕ್ಕ ರೀತಿಯಲ್ಲಿ ಇದು ಅಷ್ಟೊಂದು ಸಂತೋಷದಾಯಕವಾಗಿಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲೂ ಕೂಡ ಈ ವ್ಯವಸಾಯ ಕ್ಷೇತ್ರದಲ್ಲಿ ಭಾರಿ ಅನುಭವ ಪಡೆದಂತಹ ನನ್ನ ಮಾನ್ಯ ಮಿತ್ರರನೇಕರು ಇದ್ದರೂ ಕೂಡ ಯಾವ ರೀತಿ ಇದು ಈ ರೀತಿ ಆಯಿತು ಅಂತ ಅನ್ನುವುದು ನನಗೆ ಆಶ್ಚರ್ಯವನ್ನುಂಟುಮಾಡುತ್ತಾ ಇದೆ. ಕಾರಣವೇನೆಂದರೆ ಪೆಸ್ಟ್ ಮತ್ತು ಡಿಸೀಸಸನ್ನು ರೈತ ಸೃಷ್ಟಿ ಮಾಡುವುದಿಲ್ಲ. ಇದು ಪ್ರಕೃತಿ ಸೃಷ್ಟಿ ಮಾಡತಕ್ಕ ಖಾಯಿಲೆಗಳು. ಮನುಷ್ಯನಿಗೆ ಮಾನವ ಸಮಾಜಕ್ಕೆ ಯಾವ ರೀತಿ ಕಾಲರಾ ಮುಂತಾದ ಜಾಡ್ಯಗಳು ಬರುತ್ತವೆಯೋ ಅದೇ ರೀತಿ ಈ ಸಸ್ಯ ಸಮಾಜದಲ್ಲೂ ಈ ಖಾಯಿಲೆಗಳು ಪ್ರಕೃತಿದತ್ತವಾಗಿ ಬರುತ್ತವೆ. ಸರ್ಕಾರದವರಾದರೂ ಅಥವಾ ದೇಶವಾದರೂ ಕೂಡ ಇದನ್ನು ಎಮರ್ಜೆನ್ಸಿ ಅರ್ಥದಲ್ಲಿ ತೆಗೆದುಕೊಂಡು ಖುದ್ದು ಸರ್ಕಾರದ ಜವಾಬ್ದಾರಿಯಿಂದ, ರಾಜ್ಯದ ಜವಾಬ್ದಾರಿಯಿಂದ ಇದನ್ನು ನಿರ್ಮೂಲ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಸೂಕ್ತ. ಅದನ್ನು ಬಿಟ್ಟು ಏನೂ ಅರಿಯದಂತಹ ರೈತನಿಗೆ ಅವನೇ ಇದನ್ನು ರೆಮೆಡಿ ಮಾಡಲಿಕ್ಕೆ ಅಥವಾ ಪ್ರಿವೆಂಟ್ ಮಾಡಲಿಕ್ಕೆ ಅವನನ್ನು ಬಲಾತ್ಕಾರ ಮಾಡುವುದನ್ನು ಒಪ್ಪುವುದು ಕಷ್ಟ. ಸೆಕ್ಷನ್ 4 ಮತ್ತು ಸಬ್ ಸೆಕ್ಷನ್ 1, ಕ್ಲಾಸ್ 1—

> "On the issue of a notification under section 3, the Deputy Director of Agriculture may, by notice, direct every occupier within the affected area to carry out such preventive or remedial measures..."

ನಮ್ಮ ಸಮಾಜದಲ್ಲಿ ಇರುವುದನ್ನು ನೋಡಿದರೆ ಇದು ಬಹುಶಃ ನಮ್ಮ ರೈತರಿಗೆ ಅನ್ವಯವಾಗುವುದಿಲ್ಲ, ಭಾರಿ ಶ್ರೀಮಂತ ರೈತರಿರತಕ್ಕ ಅಮೇರಿಕಾ ಅಥವಾ ಇನ್ನಾವುದಾದರೂ ದೇಶದ ರೈತರಿಗೆ ಅನ್ವಯವಾಗಬಹುದೋ ಏನೋ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿರತಕ್ಕ ಸಾಮಾನ್ಯ ರೈತನ ಮಟ್ಟ ಅರ್ಥಮಾಡಿಕೊಂಡು ಹೇಳುವುದಾದರೆ ಇದನ್ನು ರೆಮಿಡಿ ಅಥವಾ ಪ್ರಿವೆಂಟ್ ಮಾಡುವುದಕ್ಕೆ, ನೂರಾರು ರೀತಿಯಲ್ಲಿ ಸೃಷ್ಟಿಯಾಗತಕ್ಕ ಖಾಯಿಲೆಗಳು ಬರುವುದನ್ನು ವ್ಯವಸ್ಥಿತವಾಗಿ ತಡೆಗಟ್ಟಲು ರೈತನೇ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಕಾನೂನು ಕಟ್ಟಲೆಯಿಂದ ನಿಗದಿ ಮಾಡುವುದಾದರೆ ಯಾವ ರೀತಿ ಮಾಡುತ್ತಾನೆ ಅಂತ ಅನ್ನುವುದು ಒಂದು ಸಮಸ್ಯೆ, ರೈತನಿಗೆ ಅವನಿರುವುದೇ ಒಂದು ಸ್ಟ್ರಗಲ್ ಫಾರ್ ಎಕ್ಸಿಸ್ಟೆನ್ಸ್ ಹೊಟ್ಟೆ ಬಟ್ಟೆಗೆ ಇಲ್ಲದೇ ದಿನ ನಿತ್ಯದ ಜೀವನಕ್ಕೆ ಹೋರಾಟ ಮಾಡುತ್ತಾ ಇರತಕ್ಕ ಕಾಲದಲ್ಲಿ ಇದನ್ನು ರೆಮಿಡಿ ಅಥವಾ ಪ್ರಿವೆಂಟ್ ಮಾಡುವುದಕ್ಕೆ ಅವನೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದು ಆ ರೀತಿ ಮಾಡದೇ ಇರತಕ್ಕ ಕಾಲದಲ್ಲಿ ಅಧಿಕಾರ ಮಾಡಿ ಲ್ಯಾಂಡ್ ರೆವಿನ್ಯೂ ಕಲೆಕ್ಷನ್ ರೀತ್ಯಾ ಅಥವಾ ಚಾರ್ಜ್ ಆನ್ ಲ್ಯಾಂಡ್ ಅಂತ ಹೇಳಿ ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕು ಅಂತ ಅನ್ನುವುದು ಇದು ತುಂಬಾ ಅನುಚಿತ ನಮ್ಮ ರಾಷ್ಟ್ರದ ಮಟ್ಟದಲ್ಲಿ ಅಂತ ಹೇಳಿ ನಾನು ತಿಳಿದುಕೊಂಡಿದ್ದೇನೆ. ಜೊತೆಗೆ ಇದರಲ್ಲಿ ರೆಮಿಡಿ ಮಾಡುವುದರಲ್ಲಿ, ಪ್ರಿವೆಂಟ್ ಮಾಡುವುದರಲ್ಲಿ ರೈತನು ಸಹಕಾರಿಯಾಗಬೇಕೆಂಬುದನ್ನು ಒಪ್ಪಬಹುದು, ಆದರೆ ರೈತನ ಮೇಲೆ ಒತ್ತಾಯ ತಂದು ಕಾನೂನು ಬಲದಿಂದ ಅವನೇ ಮಾಡಬೇಕೆನ್ನುವುದು ತಪ್ಪು. ಅದನ್ನು ರಾಜ್ಯ ಸರ್ಕಾರ ತನ್ನ ಖುದ್ದು ಜವಾಬ್ದಾರಿಯಿಂದ ಮಾಡಬೇಕು, ಅದಕ್ಕೆ ರೈತ ಸಹಕಾರ ಕೊಡಬೇಕು ಅಷ್ಟೆ. ಅವನೇ ಮಾಡಬೇಕೆನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ, ಅದು ಸರಿಯಲ್ಲ. ಜೊತೆಗೆ ಆಡಳಿತ ನಡೆಯುತ್ತಾ ಇರತಕ್ಕ ಕಾಲದಲ್ಲಿ ಅಧಿಕಾರಿಗಳು ಯಾವ ರೀತಿ ಸ್ವೇಚ್ಛಾ ರೀತಿಯಿಂದ ವರ್ತಿಸುತ್ತಾ ಇದ್ದಾರೆ ಎಂಬುದನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಂಡು ಇದನ್ನು ಪರಿಶೀಲಿಸಿದ ಹಾಗೆ ಇಲ್ಲ. ಡೆಪ್ಯುಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅಥವಾ ಮೇಲ್ಪಟ್ಟ ಆಫೀಸಿನಲ್ಲಿರತಕ್ಕವರು ಎಲ್ಲ ನೋಟಿಫೈ ಮಾಡಬೇಕು, ಯಾವ ರೀತಿ ಮಾಡಬೇಕು, ಸ್ಥಳಪರಿಶೀಲನೆ ಮಾಡಿ ಯಾವ ಮಾರ್ಗ ಅನುಸರಿಸಿ ನೋಟಿಫೈ ಮಾಡಬೇಕೆನ್ನುವುದು ಇದರಲ್ಲಿ ಇಲ್ಲ. ಜೊತೆಗೆ ಅವರು ಮೈಮುರಿತು ನೋಟಿಫೈ ಮಾಡಿ ಒಬ್ಬ ರೈತನ ಮೇಲೆ ದ್ವೇಷ ಇದ್ದು ಆತನನ್ನು ಚಿತಾವಣಿ ಮಾಡುವುದಕ್ಕೋಸ್ಕರ ಹೊಟ್ಟೆಕಿಚ್ಚಿನಿಂದ ನೋಟಿಫೈ ಮಾಡಿದರೆ ಅದನ್ನು ಕ್ವಶ್ಚನ್ ಮಾಡುವುದಕ್ಕೆ ಇದರಲ್ಲಿ ಅವಕಾಶವಿಲ್ಲ. ನಮ್ಮ ಮೂಲಭೂತವಾದ ಹಕ್ಕನ್ನೇ ಪ್ರಶ್ನಿಸತಕ್ಕ ಬಿಲ್ಲು ಇದು ಎಂದು ನಾನಾದರೂ ಅಂದುಕೊಳ್ಳುತ್ತೇನೆ.

ಇನ್ನು ಅಫೆನ್ಸಸ್ ಅನ್ನುವುದರಲ್ಲಿ ರೈತನನ್ನು ಫೀನಲೈಸ್ ಮಾಡುತ್ತೇವೆ ಅಂತ ಅನ್ನುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಪ್ರಕೃತಿಯಿಂದ ಬರತಕ್ಕ, ಸ್ವಾಭಾವಿಕವಾಗಿ ಬರತಕ್ಕ ಪೆಸ್ಟ್ಸ್ ಅಂಡ್ ಡಿಸೀಸಸ್‌ಗೆ ರೈತ ಕಾರಣ ಅಂತ ಹೇಳಿ ಅವನನ್ನು ಪೀನಲೈಸ್ ಮಾಡುವುದಕ್ಕೆ ಹೊರಟಿರುವುದು ಯಾವ ರೀತಿ ಸರಿಯಾಗುತ್ತದೆ ಅಂತ ಅನ್ನುವುದು ಇನ್ನೂ ಕೂಡ ಆಶ್ಚರ್ಯವನ್ನುಂಟುಮಾಡುತ್ತಾ ಇದೆ. 3ನೇ ಸೆಕ್ಷನ್ ಸಬ್ ಕ್ಲಾಸ್ 1;2,3ರಲ್ಲಿ ಅನಗತ್ಯವಾದ ಕೆಲವು ವಿಚಾರಗಳು ಇವೆ. ಇಂತಹ ಕೆಲ ಕೆಲವು ಸೆಕ್ಷನ್‌ಗಳು ಇದರಲ್ಲಿದೆ. ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳು ಡೆಸ್ಪಾಟಿಕ್ ಆಗಿ ಏನೇ ಮಾಡಿದರೂ ಕೂಡ ಅದನ್ನು ಕ್ವಶ್ಚನ್ ಮಾಡತಕ್ಕ ಅವಕಾಶವು ಕೂಡ ರೈತನಿಗೆ ಇಲ್ಲ ಅಂತ ಅನ್ನುವುದನ್ನು ನೋಡಿದರೆ ಇದು ಪ್ರೋಗ್ರೆಸೀವ್ ಅಂತ ಹೇಳಿ ಈ ಬಿಲ್ಲಿನ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ನಮ್ಮ ವ್ಯವಸಾಯ ಕ್ಷೇತ್ರದಲ್ಲಿ ಇಂತಹ ಕಾನೂನು ಅವಶ್ಯ ಅಂತ ಅನಿಸಿದರೂ ಕೂಡ ಯಾರು ಖಾಯಿಲೆಯನ್ನು ತಪ್ಪಿಸಬೇಕು, ಆ ಜವಾಬ್ದಾರಿ ಯಾರದು ಇರಬೇಕು, ಅಂತ ಏನು ಇದರಲ್ಲಿ ಹೇಳಿದೆ ಈ ಅರ್ಥ ಬೇರೆ ರೀತಿಯಲ್ಲಿ ಉಪಯೋಗಿಸಿಕೊಂಡು ರೈತನನ್ನು ಜವಾಬ್ದಾರನನ್ನಾಗಿ ಮಾಡದೆ ರಾಜ್ಯ ಸರ್ಕಾರವೇ ಆ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.

> "It is the duty of the State Government to cure such diseases ; it is not the ryot's duty. The ryot should not be penalised for the nature's curse."

ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಮಾಡಿದರೆ ಚೆನ್ನಾಗಿತ್ತು. ಈಗಲೂ ಕೂಡ ಕಾಲ ಮಿಂಚಿ ಹೋಗಿಲ್ಲ, ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಪುನಃ ಇದನ್ನು ಪುನರ್‌ಪರಿಶೀಲನೆ ಮಾಡಿ ಇದನ್ನು ಬೇರೆ ರೀತಿಯಲ್ಲಿ ಫಾರ್ಮುಲೇಟ್ ಮಾಡಿ ಸಭೆಯ ಮುಂದೆ ತಂದರೆ ಚೆನ್ನಾಗಿರುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಮಾನ್ಯ ಸಭಾಪತಿಗಳೇ, ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಖಾಂತರ ಬಂದಿರುವಂತಹ ಮೈಸೂರು ಅಗ್ರಿಕಲ್ಚರಲ್ ಪೆಸ್ಟ್ಸ್ ಅಂಡ್ ಡಿಸೀಸಸ್ ಬಿಲ್‌ನ ವಿಚಾರವಾಗಿ ನನ್ನ ಮಿತ್ರರು ಶ್ರೀಮಾನ್ ನಂಜೇಗೌಡರು ಹೇಳಿದಹಾಗೆ ಇದನ್ನು ಪುನಃ ಪರಿಶೀಲನೆಗೆ ಆ ಕಮಿಟಿಗೆ ಈ ಕೆಳಕಂಡ ಕಾರಣಗಳಿಗಾಗಿ ವಾಪಸು ಕಳುಹಿಸಬೇಕೆಂದು ಹೇಳುತ್ತೇನೆ. ರೈತ ಮತ್ತು ಕಾನೂನು ಇವೆರಡನ್ನೂ ಗಮನವಲ್ಲಿಟ್ಟುಕೊಂಡು ವಿಚಾರ ಮಾಡ ಬೇಕಾಗುತ್ತದೆ. ಯಾವುದಾದರೂ ಒಂದು ಕಾನೂನನ್ನು ಮಾಡಬೇಕಾದರೆ ಯಾರ ಮೇಲೆ ಕಾನೂನನ್ನು ಜಾರಿ ಮಾಡಬೇಕು, ಅದನ್ನು ಯಾವ ರೀತಿಯಲ್ಲಿ ವ್ಯವಹಾರ ಮಾಡತಕ್ಕವರು ಕಾರ್ಯ ರೂಪಕ್ಕೆ ತರಬಹುದು ಎಂಬುದನ್ನು ನಾವು ಯೋಚನೆ ಮಾಡಬೇಕು. ಕೇವಲ ಕಾನೂನು ಮಾಡು ವುದರಿಂದಲೇ ಒಂದು ಕಾನೂನನ್ನು ಜಾರಿಗೆ ತಂದ ಹಾಗೆ ಆಗುವುದಿಲ್ಲ. ಸರ್ಕಾರದವರು ರೈತನ ಹಿತದೃಷ್ಟಿಯನ್ನು ಕಾಪಾಡಬೇಕೆಂದು ನಾನಾ ಮುಖವಾಗಿ ರೈತನಿಗೆ ಸಹಾಯ ಮಾಡಬೇಕೆಂದು ಹೇಳುತ್ತಾ ಇರುವಂತಹ ಸಂದರ್ಭದಲ್ಲಿ ಇಂತಹ ಒಂದು ಬಿಲ್ಲನ್ನು ತಂದು ರೈತನಿಗೆ ಕಿರುಕುಳ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಾ ಇರುವುದು ಸರ್ವಥಾ ಸಾಧುವಲ್ಲ. ಏಕೆಂದರೆ ಯಾವುದಾದರೂ ಕೆಲವೊಂದು ಕಾರಣಗಳಿಗಾಗಿ ಕಷ್ಟಪರಿಸ್ಥಿತಿ ಬೆಳೆಗೆ ಬಂದಂತಹ ಸಂದರ್ಭದಲ್ಲಿ ರೈತ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿ ಆತನ ಮೇಲೆ ಉಗ್ರವಾದ ಕಾರ್ಯಕ್ರಮ ತೆಗೆದುಕೊಳ್ಳುವಂತಹ ಅಧಿಕಾರವನ್ನು ಈ ಬಿಲ್ಲು ಸಂಬಂಧಪಟ್ಟ ಅಧಿಕಾರವರ್ಗ ದವರಿಗೆ ಕೊಡುತ್ತದೆ. ಆ ಕಾರಣದಿಂದ ಇದು ಸಾಧುವಾದುದಲ್ಲ. ಎಲ್ಲೋ ಹುಳು ಹುಪ್ಪಟೆಗಳಿಂದ ಬೆಳೆಗೆ ಖಾಯಿಲೆ ಬಂದು ರೈತನ ಶ್ರಮಕ್ಕೆ ರೈತನ ದುಡಿಮೆಗೆ ಧಕ್ಕೆ ಬರುತ್ತದೆಯೋ ಅಂತಹ ಕಡೆ ಪ್ರಚಾರದ ಮುಖಾಂತರ ಅದನ್ನು ಹೇಗೆ ಹೋಗಲಾಡಿಸಬೇಕೆಂಬುದನ್ನು ತಿಳಿಯಪಡಿಸದೆ ಈ ರೀತಿ ಯಲ್ಲಿ ಕಾನೂನನ್ನು ಜಾರಿ ಮಾಡಿದರೆ ಅಧಿಕಾರಿಗಳಿಗೆ ರೈತನಿಗೆ ಕಿರುಕುಳ ಕೊಡುವುದಕ್ಕೆ ಸಾಕಾದಷ್ಟು ಅಧಿಕಾರ ಇದರಿಂದ ದೊರಕುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಒಬ್ಬ 18 ವರ್ಷಕ್ಕೆ ಮೇಲ್ಪಟ್ಟಂತಹ ಒಬ್ಬ ಮಗ ರೈತನಿಗೆ ಇದ್ದರೆ ಆತನನ್ನು ಬಲಾತ್ಕಾರವಾಗಿ ಕರೆದು ಉಪಯೋಗಿಸಿಕೊಳ್ಳುವಂತಹ ಅವಕಾಶ ಇದೆ. ಮತ್ತು ರೈತ ತನ್ನ ಬೆಳೆ ಏನಿದೆ ಅದು ನಾಶ ವಾಗುವುದನ್ನು ತಡೆಯುವುದಕ್ಕೆ ಸದಾ ಸಿದ್ಧನಾಗಿರುತ್ತಾನೆ. ಅವನು ಮಾಡತಕ್ಕ ಪ್ರಯತ್ನ ಮಾಡುತ್ತಾನೆ. ಕೋಟ್ಯಾಂತರ ರೂಪಾಯಿ ವೆಚ್ಚಮಾಡಿ ವ್ಯವಸಾಯದ ಕೆಲಸವನ್ನು ಇಟ್ಟು ಕೊಂಡು ತಜ್ಞರನ್ನು ಇಟ್ಟುಕೊಂಡು, ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿ, ಯಂತ್ರಗಳು ಮುಂತಾದುವು ಗಳನ್ನು ಇಟ್ಟುಕೊಂಡಿಲ್ಲದೇ ಇರತಕ್ಕ ರೈತನನ್ನು ಈ ರೀತಿಯ ವ್ಯವಸ್ಥೆ ಮಾಡಬೇಕೆಂದು ಕೇಳುವುದು ಸರ್ವಥಾ ಸಾಧುವಾದುದಲ್ಲ. ಗ್ರಾಮಾಂತರದಲ್ಲಿ ಇರುವಂತಹ, ಜಮೀನು ಆಬಾದು ಮಾಡುತ್ತಾ ಇರತಕ್ಕ, ದೇಶದ ಜನಕ್ಕೆ ಅನ್ನವನ್ನು ಕೊಡುತ್ತಾ ಇರುವಂತಹ ರೈತನನ್ನು ಕಾನೂನಿನ ಚೌಕಟ್ಟಿನಲ್ಲಿ ಹಿಡಿದು ಆತನನ್ನು ಕಿರುಕುಳಕ್ಕೆ ಒಳಪಡಿಸುತ್ತಾ ಇದ್ದೀರಿ ಎಂದು ಹೇಳಿದರೆ ತಪ್ಪಾಗ ಲಾರದು, ಇಂತಹ ಒಂದು ಕಾನೂನನ್ನು ನಾವು ಇವತ್ತು ಮಾಡುತ್ತಾ ಇದ್ದೇವೆ. ಶ್ರೀಮಾನ್ ನಂಜೇಗೌಡರು ಹೇಳಿದಹಾಗೆ ದೊಡ್ಡ ದೊಡ್ಡ ಜಮೀನುಗಳನ್ನು ಪಡೆದವರಿಗೆ ಇದು ಸರಿಹೋಗು ತ್ತದೆಯೇ ಹೊರತು ಸಣ್ಣ ಸಣ್ಣ ಜಮೀನುಗಳನ್ನು ಪಡೆದಿರುವಂತಹ ಸಂದರ್ಭದಲ್ಲಿ ಬೆಳೆಗೆ ನಷ್ಟ ವಾಗುವಂತಹ ಸಂದರ್ಭ ಬಂದಾಗ ಸರ್ಕಾರದವರೇ ಮುಂದೆ ಬಂದು ಅದನ್ನು ಹೋಗಲಾಡಿಸು ವುದಕ್ಕೆ ವ್ಯವಸ್ಥೆ ಮಾಡಬೇಕು. ಜನರನ್ನು, ರೈತರನ್ನು ಕಾಪಾಡಬೇಕು, ಆ ರೀತಿ ಮಾಡುವುದನ್ನು ಬಿಟ್ಟು ರೈತನನ್ನು ಕಾನೂನಿನ ಚೌಕಟ್ಟಿನಲ್ಲಿ ಹಿಡಿದು ಆತನನ್ನು ದಂಡಿಸುತ್ತೇವೆ ಅಂತ ಅನ್ನು ವಂತಹದು ಏನಿದೆ ಇದರಿಂದ ಮುಂದೆ ಸರ್ಕಾರಕ್ಕೆ ತೊಂದರೆಯಾದೀತು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕಾರಣ ನಮ್ಮ ರೈತನ ತಿಳಿವಳಿಕೆ ವ್ಯವಸಾಯಕ್ಕೆ ಸಂಬಂಧಪಟ್ಟ ರೋಗಗಳ ಬಗ್ಗೆ ಬಹಳ ಕಡಮೆಯಾಗಿದೆ. ಅವನು ಇಷ್ಟು ದಿವಸಗಳಲ್ಲಿ ಬೆಳೆಗೆ ಬಂದಿರುವ ರೋಗವನ್ನು ತಡೆಗಟ್ಟಬೇಕು ಎಂದು ಗೊತ್ತುಮಾಡಿ ಆ ರೀತಿ ಮಾಡಲು ಸಾಧ್ಯವಾಗದಿದ್ದರೆ, ಮಾಡದಿದ್ದರೆ ಅವನ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ನಮೂದಿಸಿದ್ದಾರೆ. ಬಂದಿರುವ ರೋಗ ಹರಡುವುದನ್ನು ತಡೆಗಟ್ಟಲು ಬೇಕಾದ ಪ್ರಯತ್ನ ಮಾಡುವುದನ್ನು ಬಿಟ್ಟು ಕಾನೂನು ಮೂಲಕ ರೈತನಿಗೆ ತೊಂದರೆ ಮಾಡುವುದಕ್ಕೆ ಈ ಬಿಲ್ಲಿನಲ್ಲಿ ಅವಕಾಶ ಮಾಡಿರುವುದು ಸರಿಯಲ್ಲ. ವ್ಯವಸಾಯದ ಇಲಾಖೆಯು ತಕ್ಷಣ ಕ್ರಮ ತೆಗೆದುಕೊಂಡು ಕ್ರಿಮಿಕೀಟಗಳ ಹಾವಳಿಯನ್ನು, ಬಂದಿರುವ ರೋಗವನ್ನು ತಡೆಗಟ್ಟಿ ರೈತರಿಗೆ ಅನುಕೂಲ ಮಾಡಬೇಕೇ ಹೊರತು ಕಾನೂನು ಮಾಡಿ ಬೆಳೆಯು ನಾಶವಾಗುವುದಕ್ಕೆ ಅವಕಾಶ ಮಾಡುವುದು ಸಾಧುವಲ್ಲ. ಈ ಬಿಲ್ಲು ಅದಕ್ಕೆ ಸಹಾಯಕಾರಿಯಾಗಿರುವುದರಿಂದ ಇದನ್ನು ಪುನರ್ಪರಿಶೀಲನೆ ಮಾಡಲು ಪುನಃ ಇದನ್ನು ಸಮಿತಿಯ ಪರಿಶೀಲನೆಗೆ ಕಳುಹಿಸಬೇಕು ಎಂದು ಹೇಳಬಯಸುತ್ತೇನೆ.

†ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸನ್ಮಾನ್ಯ ಸಭಾಪತಿಗಳೇ, ಈಗ ನಮ್ಮ ಎದುರಿಗಿರುವ ಬಿಲ್ಲು ಅತ್ಯಂತ ಸದುದ್ದೇಶವುಳ್ಳದ್ದಾಗಿದ್ದರೂ ಅದರ ರೂಪರೇಷೆಗಳ ಬಗ್ಗೆ ತುಲನೆ ಮಾಡಿದರೆ ಅದರ ಪರಿಣಾಮದ ಬಗ್ಗೆ ವಿಚಾರಮಾಡಿದರೆ ಅದು ನಿಜವಾಗಿಯೂ ಕೂಡ ಮೈಸೂರು ರಾಜ್ಯದ ಒಕ್ಕಲುತನದವರಿಗೆ ತೊಂದರೆಯನ್ನುಂಟುಮಾಡುತ್ತದೆ ಎಂಬುದು ವ್ಯಕ್ತವಾಗುತ್ತದೆ. ಇಂದು ಈ ಸಭೆಯಲ್ಲಿ ನಾಯಕರಾದ ಶ್ರೀಮಾನ್ ವೀರೇಂದ್ರ ಪಾಟೀಲರು ಮಾತನಾಡುತ್ತಾ ಮಾನ್ಯ ಸದಸ್ಯರು ರಚನಾತ್ಮಕವಾದ ಸಲಹೆ ಕೊಟ್ಟರೆ ಅದು ಯಾವುದೇ ಪಕ್ಷದಿಂದ ಬಂದರೂ ಸಹ ಸ್ವಾಗತಿಸುವುದಾಗಿ ಹೇಳಿದರು, ಬಹಳ ಸಂತೋಷ. ಈ ದಿವಸ ಪೀಕಿಗೆ ರೋಗ ಬರುವುದನ್ನು ನಿವಾರಣೆ ಮಾಡುವುದಾಗಿ ಹೇಳುವ ಸರಕಾರ ಹಾಗೆ ಮಾಡಿ ರೈತರಿಗೆ ಉಪಕಾರ ಮಾಡುವುದಾಗಿ ಹೇಳುವ ಸರಕಾರ ರೈತರಿಗೆ ತೊಂದರೆಮಾಡಲು ಅವರನ್ನು ಗುಲಾಮರನ್ನಾಗಿ ಮಾಡಲು ಅಧಿಕಾರ ಪಡೆದಿದ್ದಾರೆ, ಅಲ್ಲದೆ ಆ ಅಧಿಕಾರವನ್ನು ಒಬ್ಬ ಡೆಪ್ಯುಟಿ ಡೈರೆಕ್ಟರಿಗೆ ಕೊಟ್ಟಿದ್ದಾರೆ. ಇದರ ಪರಿಣಾಮವೇನಾಗುತ್ತದೆಂಬುದನ್ನು ಸಂಬಂಧಪಟ್ಟ ಉಪಮಂತ್ರಿಗಳು ಮತ್ತು ಮಂತ್ರಿಗಳು ಗಮನಿಸಬೇಕು ಎಂಬುದನ್ನು ನಿವೇದನೆಮಾಡುತ್ತಿದ್ದೇನೆ. ಅಧಿಕಾರ ಯಾರಿಗೂ ಕೂಡ ಬಹಳ ದಿವಸ ಇರುವುದಿಲ್ಲ, ಹಿಂದಿನ ಮುಖ್ಯ ಮಂತ್ರಿಗಳು ತಾವು ಮೈಸೂರು ರಾಜ್ಯದಲ್ಲಿರುವವರೆಗೂ ಈ ರಾಜ್ಯದ ಮುಖ್ಯ ಮಂತ್ರಿಯಾಗಿರುವುದಾಗಿ ಹೇಳುತ್ತಿದ್ದರು. ಈ ದಿವಸ ಅವರು ಮುಖ್ಯ ಮಂತ್ರಿಯಾಗಿಲ್ಲ, ಇಂದಿರುವ ವೀರೇಂದ್ರ ಪಾಟೀಲರೂ ಕೂಡ ಶಾಶ್ವತವಾಗಿ ಬಹಳ ಕಾಲದವರೆಗೆ ಮುಖ್ಯಮಂತ್ರಿಗಳಾಗಿರುವುದಿಲ್ಲ ಎಂಬುದನ್ನು ಅವರು ಅರಿಯಬೇಕು. ಇಂದು ನಾವು ಮಾಡುವ ಕಾಯಿದೆ ಮುಂದೆ ನಾವು ಅಧಿಕಾರ ಬಿಟ್ಟಮೇಲೆ ನಮ್ಮ ಮೇಲೆ ಸಹ ಅದರ ಪರಿಣಾಮ ಉಂಟುಮಾಡುತ್ತದೆ ಎಂಬುದನ್ನು ಅವರು ಅರಿಯಬೇಕು. ಆ ದೃಷ್ಟಿಯಿಂದ ಈ ಕಾಯಿದೆಯನ್ನು ವಿಮರ್ಶೆ ಮಾಡಬೇಕು. ಈ ಬಿಲ್ಲು ಸೆಲೆಕ್ಟ್ ಸಮಿತಿಗೆ ಹೋಗುವಾಗ ಮಾನ್ಯ ಮುಖ್ಯಮಂತ್ರಿಗಳು ಇದರ ಪುನರ್ಪರಿಶೀಲನೆಯಾಗುತ್ತದೆ, ಲೋಪದೋಷಗಳು ನಿವಾರಣೆಯಾಗುತ್ತವೆ ಎಂದು ಆಶ್ವಾಸನೆ ಕೊಟ್ಟರು. ಇಂದು ಆ ಸಮಿತಿಯ ವರದಿ ಬಂದರೂ ಸಹ ಆ ಸಮಿತಿಯ ಸದಸ್ಯರು ಎಲ್ಲರೂ ಸಮಿತಿಯ ವರದಿಗೆ ಪೂರ್ಣ ಒಪ್ಪಿಗೆಯನ್ನು ನೀಡಿಲ್ಲ, ಕೆಲವರು ಭಿನ್ನಾಭಿಪ್ರಾಯವನ್ನು ಸೂಚಿಸಿದ್ದಾರೆ, ಎಂ. ಆರ್. ಪಾಟೀಲರು ಪ್ರಾಸಿಕ್ಯೂಷನ್ ಕ್ರಮ ತೆಗೆದುಕೊಳ್ಳುವ ಸೆಕ್ಷನ್ ಬಗ್ಗೆ ಬಹಳ ಕಟುವಾಗಿ ಟೀಕಿಸಿರುವುದು ಸಮಿತಿಯ ವರದಿಯಲ್ಲಿದೆ. ಅಲ್ಲದೆ ಪ್ರಾಸಿಕ್ಯೂಷನ್ ಬಗ್ಗೆ ಡೆಪ್ಯುಟಿ ಡೈರೆಕ್ಟರಿಗೆ ಅಧಿಕಾರ ಕೊಡುವುದು ಯಾವ ನ್ಯಾಯ? ನಾನು ಬೆಳೆದ ಪೈರನ್ನು ರಕ್ಷಣೆ ಮಾಡಬೇಕೆಂಬ ಬಗ್ಗೆ ನನಗೆ ಆಸಕ್ತಿ ಇರುವುದಿಲ್ಲವೇ? ರೈತನ ಕೈಲಿ ಬೆಳೆಯನ್ನು ಕ್ರಿಮಿಕೀಟಗಳಿಂದ, ರೋಗದಿಂದ ರಕ್ಷಣೆಮಾಡಲು ಸಾಧ್ಯವಾಗದಿರುವಾಗ ಸಾಮೂಹಿಕವಾಗಿ ಕೆಲಸಮಾಡಿ ರೋಗ ನಿವಾರಣೆ ಮಾಡಬೇಕೆಂದು ಹೇಳುವುದೇನೋ ಸರಿ. ಆದರೆ ರೈತ ಸಹಕರಿಸಲಿಲ್ಲ, ರೋಗ ನಿವಾರಿಸಲು ಸರಿಯಾದ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಆ ಒಂದು ನೆಪದಿಂದ ಕಡ್ಡಾಯವಾಗಿ ಆ ಕೆಲಸವನ್ನು ಬೇರೆಯವರಿಂದ ಮಾಡಿಸಿ ರೈತನಿಂದ ಕಡ್ಡಾಯವಾಗಿ ಅದಕ್ಕೆ ತಗಲುವ ಖರ್ಚನ್ನು ವಸೂಲುಮಾಡಬೇಕೆಂದು ಹೇಳುವುದು ಸರಿಯೇ? ರೈತ ಆ ಖರ್ಚನ್ನು ಕೊಡದಿದ್ದರೆ ಅವನ್ನು ಅವನ ಆಸ್ತಿಪಾಸ್ತಿಯಿಂದ ವಸೂಲು ಮಾಡುತ್ತೇವೆಂದು ಹೇಳುವುದು ಬುದ್ಧಿವಂತಿಕೆಯೇ? ಹೀಗೆ ಮಾಡಿ ಅಧಿಕಾರಿಗಳು ರೈತನನ್ನು ಹಿಂಸೆಮಾಡಲು ಅವಕಾಶ ಇದೆ. 7 ದಿವಸ ರೈತನನ್ನು ಕೆಲಸಕ್ಕೆ ಕರೆಯಲು ಡೆಪ್ಯುಟಿ ಡೈರೆಕ್ಟರಿಗೆ ಅಧಿಕಾರವಿದೆ. ಈ ರೀತಿ ರೈತರನ್ನು ಹಿಂಸೆಗೆ ಗುರಿಮಾಡಲು ಅವಕಾಶವಿರುವುದರಿಂದ ಈ ಬಿಲ್ಲನ್ನು ವಿರೋಧಿಸಬೇಕಾಗಿದೆ; ಹೀಗಿರುವುದರಿಂದ ಈ ಬಿಲ್ಲನ್ನು ಯಾವ ಉದ್ದೇಶದಿಂದ ತಂದರೋ ಅದು ಸಾರ್ಥಕವಾಗುವುದಿಲ್ಲ. ರಾಜ್ಯದಲ್ಲಿ ಒಕ್ಕಲತನದ ಅಭಿವೃದ್ಧಿಯಾಗಬೇಕು, ಏಳಿಗೆಯಾಗಬೇಕು ಎಂದು ಹೇಳುವಾಗ ಈ ಬಿಲ್ಲಿನ ಉದ್ದೇಶ ಅದಕ್ಕೆ ಧಕ್ಕೆ ತರುವಂತಿದೆ. ರೈತರಿಗೆ ಪೀಕಿಗೆ ಬರುವ ರೋಗವನ್ನು ತಡೆಗಟ್ಟಲು ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಅದು ಅವರು ಮಾಡಬೇಕಾದ ಕೆಲಸಕ್ಕೆ ಅಡ್ಡಿ ತರುತ್ತದೆ. ಅವರಲ್ಲಿ ತಾಂತ್ರಿಕ ಅಜ್ಞಾನ ಇದೆ. ಅದನ್ನು ಗಮನಿಸಿ ಈ ಬಿಲ್ಲನ್ನು ತಂದರೆ. ಆದರೆ ತಂದ ಉದ್ದೇಶ ನೆರವೇರುವಂತಿಲ್ಲ. ಇಂದು ವಿಮಾನದಿಂದ ಔಷಧಿಯನ್ನು ಸಿಂಪಡಿಸಿ ಸರಕಾರ ಅದಕ್ಕೆ ಹಣ ಖರ್ಚುಮಾಡಿ ಸಂಬಂಧಪಟ್ಟ ರೈತರ ಆಸ್ತಿಪಾಸ್ತಿಯಿಂದ ಅದನ್ನು ವಸೂಲುಮಾಡಬೇಕೆನ್ನುವುದು ಮತ್ತು ಕರೆದಾಗ 7 ದಿವಸಗಳಲ್ಲಿ ಬರಬೇಕೆಂಬುದು ರೈತರಿಗೆ ಕಿರುಕುಳವನ್ನುಂಟುಮಾಡುತ್ತದೆ. ಇಡೀ ಕಾಯಿದೆಯನ್ನು ಓದಿದರೆ ಅನೇಕ ಕಲಮುಗಳಲ್ಲಿ ಲೋಪದೋಷಗಳು ಇರುವುದು ಕಂಡುಬರುತ್ತದೆ. ಅವನ್ನು ಸರಿಪಡಿಸದಿದ್ದರೆ ಮಸೂದೆಯನ್ನು ತಂದಿರುವ ಉದ್ದೇಶ ಸಫಲವಾಗುವುದಿಲ್ಲ. ಸೆಲೆಕ್ಟ್ ಕಮಿಟಿಗೆ ಸಾಕಷ್ಟು ಕಾಲಾವಕಾಶ ಸಿಕ್ಕದೆ ಅಥವಾ ಸಿಕ್ಕಿದ್ದರೂ ಅವರು ಸರಿಯಾಗಿ ಪರಿಶೀಲಿಸಲು ಅವಕಾಶವಾಗದೆ ಲೋಪದೋಷಗಳು ಪೂರ್ಣವಾಗಿ ನಿವಾರಣೆಯಾಗಿಲ್ಲ. ಅದಕ್ಕಾಗಿ ನಂಜೇಗೌಡರು ಹೇಳಿದಂತೆ ಇದನ್ನು ಪುನಃ ಸೆಲೆಕ್ಟ್

(ಶ್ರೀ ಕೆ. ಎಚ್. ಪಾಟೀಲ್)

ಕಮಿಟಿಗೆ ಅಥವಾ ಬೇರೊಂದು ಸಮಿತಿಗೆ ಕಳಿಸಿ ಪುನರ್ಪರಿಶೀಲನೆ ಮಾಡಿಸುವುದು ಅತ್ಯಾವಶ್ಯಕ ವಾಗಿದೆ. ಆದುದರಿಂದ ಈ ವಿಧೇಯಕವನ್ನು ಈ ಸಭೆಯಿಂದ ವಿತ್‌ಡ್ರಾ ಮಾಡಿ ಪುನರ್ಪರಿಶೀಲನೆ ಮಾಡಲು ತಕ್ಕ ಕ್ರಮ ಕೈಕೊಳ್ಳಬೇಕು.

ಇಂದು ಈ ಮಸೂದೆಯಲ್ಲಿ ರಾಜ್ಯಾಂಗದಲ್ಲಿ ನಮಗಿದಾಗಿರುವ ಹಕ್ಕಿಗೆ ಚ್ಯುತಿ ಬರುವಂತಿದೆ. ಎಲ್ಲರಿಗೂ ಸಮಾನವಾದ ಹಕ್ಕು ಇರಬೇಕು ಎಂದು ಹೇಳುವಾಗ ಹೆಣ್ಣುಮಕ್ಕಳಿಗೇ ಒಂದು ಗಂಡು ಮಕ್ಕಳಿಗೇ ಒಂದು ಕಾಯಿದೆ ಮಾಡುವುದು ಸರಿಯಲ್ಲ. ಅದಲ್ಲದೆ ಔಷಧಿ ಸಿಂಪಡಿಸಲು ಹೆಣ್ಣು ಮಕ್ಕಳ ಉಪಯೋಗವೇ ಜಾಸ್ತಿ ಎಂಬುದನ್ನು ಮರೆತಿರುವ ಹಾಗೆ ತೋರುತ್ತದೆ. ಆದರೆ ಅವರಿಗೆ ಕ್ರಿಮಿಕೀಟಗಳ ನಿಯಂತ್ರಣ ಮಾಡಲು ಕಾಯಿದೆಯಲ್ಲಿ ಅವಕಾಶವಿಲ್ಲ. ಗಂಡಸರಿಗೆ ಮಾತ್ರ ಅವಕಾಶ ಮಾಡಿದ್ದಾರೆ. ಅನೇಕ ಕಲಮುಗಳಲ್ಲಿ ಹೀಗೆ ವಿಪರ್ಯಾಸವಿದೆ. ಈ ಕಾಯಿದೆಯನ್ನು ಯಾವ ಉದ್ದೇಶದಿಂದ ತಂದರೋ ಅದು ನೆರವೇರದೆ ಬಹಳ ದುಷ್ಪರಿಣಾಮವುಂಟಾಗಲಿದೆ. ಇಂದು ಪ್ರಜಾಪ್ರಭುತ್ವವು ಯಶಸ್ವಿಯಾಗಿ ನಡೆಯಬೇಕೆಂದಿದ್ದರೆ ಸರಿಯಾದ ಕಾನೂನುಗಳನ್ನು ರಚಿಸ ಬೇಕು, ಇಲ್ಲದಿದ್ದರೆ ಅದು ನಶಿಸಿಹೋಗುತ್ತದೆ. ಇತ್ತೀಚೆಗೆ ಈ ಸರಕಾರ ಉಳುವವರನ್ನು ತನ್ನ ನಿಯಂತ್ರಣದಲ್ಲಿಡಬೇಕು ಎಂಬ ಅಭಿಲಾಷೆ ಹೊಂದಿರುವಂತೆ ಭಾಸವಾಗುತ್ತಿದೆ. ಸರಕಾರ ಇಂದು ಜನತೆಯ ವಿಶ್ವಾಸವನ್ನು ಕಳೆದುಕೊಂಡಿದೆ ಎಂಬ ಭಾವನೆಯಿದೆ. ಜನರಿಗೆ ಸರಿಯಾದ ತಿಳಿವಳಿಕೆ ಕೊಡಲು ಸಾಮರ್ಥ್ಯವಿಲ್ಲದೆ ನೈತಿಕ ಬೆಂಬಲ ಕಳೆದುಕೊಂಡಿರುವ ಸರಕಾರ ಅಧಿಕಾರವನ್ನು ಕೈಬಿಡುವುದು ಒಳ್ಳೆಯದು. ನಮ್ಮದು ರೈತರ ರಾಜ್ಯವಾಗಬೇಕೆಂದು ಮಹಾತ್ಮಾ ಗಾಂಧಿ ಯವರು ಹೇಳುತ್ತಿದ್ದರು. ಆದರೆ ರೈತರನ್ನು ಇವತ್ತಿನ ದಿನ ಕೂಲಿಗಾರರಂತೆ ಭಾವಿಸಲಾಗುತ್ತಿದೆ. ವಿರೋಧ ಪಕ್ಷದವರು ಹೇಳುವುದಕ್ಕೆ ಇಂದು ಸಾಕಷ್ಟು ಬೆಲೆ ಇಲ್ಲ. ಮುಂದೆ ಬೆಲೆ ಕೊಡಬೇಕಾದ ಕಾಲ ಬರುತ್ತದೆ. ವಿರೋಧ ಪಕ್ಷದವರು ರೈತರ ಮತ್ತು ಜನರ ಅಭಿಪ್ರಾಯಗಳನ್ನು ಪ್ರತಿ ಬಿಂಬಿಸುತ್ತಾರೆಂಬುದನ್ನು ಮರೆಯಬಾರದು. ಈ ಕಾಯಿದೆ ಈಗಿರುವಂತೆ ಜಾರಿಗೆ ತರುವುದನ್ನು ಬಲವಾಗಿ ವಿರೋಧಿಸಿ ಇದನ್ನು ಪುನರ್ಪರಿಶೀಲನೆ ಮಾಡಬೇಕೆಂದು ಒತ್ತಾಯಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಶ್ರೀಮಾನ್ ನಂಜೇಗೌಡರು ತಂದಿರತಕ್ಕ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಮಸೂದೆಯನ್ನು ಈ ಸಭೆಯಲ್ಲಿ ತಂದಂಥ ಬಹು ಮುಖ್ಯವಾದ ಉದ್ದೇಶವೆಂದರೆ ರೈತರಿಗೆ ಒಳ್ಳೆಯ ದಾಗಬೇಕು, ರೈತರ ಬೆಳೆ ಹಾಳಾಗದೆ ಇರಬೇಕು ಎನ್ನುವುದೇ ಆಗಿದೆ. ಈ ಮಸೂದೆಯಲ್ಲಿ ಕೆಲವು ಕುಂದುಕೊರತೆಗಳಿವೆ ಎಂದು ಅದನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳಿಸಲಾಯಿತು. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಕೊಟ್ಟಿರುವ ವರದಿಯನ್ನು ನೋಡಿದರೂ ಕೂಡ ಆ ಉದ್ದೇಶ ಸಫಲವಾದಂತೆ ಕಂಡುಬರುವುದಿಲ್ಲ. ಕ್ರಿಮಿ ನಾಶಕಗಳು ಬಂದಿರುವುದು ಏಕೆ? ಕ್ರಿಮಿಕೀಟ ಗಳಿಂದ ರೈತನಾದವನು ತನ್ನ ಜಮೀನಿನಲ್ಲಿರುವ ಬೆಳೆಗೆ ತೊಂದರೆಯಾಗಲಿ ಎಂದು ಉತ್ಪತ್ತಿ ಮಾಡುತ್ತಾನೆಯೇ? ತನ್ನ ಬೆಳೆಯನ್ನು ತಾನೇ ಹಾಳುಮಾಡಿಕೊಳ್ಳುತ್ತಾನೆಯೇ ಎನ್ನುವ ವಿಚಾರ ವನ್ನು ಕೂಡ ಸಮಿತಿಯವರು ಯೋಚನೆ ಮಾಡಿದ ಹಾಗೆ ಕಂಡು ಬರುವುದಿಲ್ಲ. ಕೀಟಗಳು ಮತ್ತು ಸಸಿ ಕಾಯಿಲೆ ಸಾಮಾನ್ಯವಾಗಿ ಗಾಳಿಯಿಂದ ಬರುತ್ತವೆ. ಏರ್ ಬೋರ್ನ್, ವಾಟರ್ ಬೋರ್ನ್, ಸೀಡ್ ಬೋರ್ನ್ ಮತ್ತು ಸಾಯಿಲ್ ಬೋರ್ನ್ ಇವುಗಳೂ ಇವೆ. ಇದಕ್ಕೆ ಯಾವ ರೀತಿಯಲ್ಲಿ ರೈತನಾದವನು ಜವಾಬ್ದಾರ ಎನ್ನುವುದನ್ನು ಕೂಡ ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ಸರ್ಕಾರದವರು ನಿಜವಾಗಿಯೂ ರೈತನಿಗೆ ಸಹಾಯ ಮಾಡಬೇಕು ಎಂದಿದ್ದರೆ, ರೈತನ ಜಮೀನಿನಲ್ಲಿ ಬರುವ ಕೀಟ ಮತ್ತು ಕಾಯಿಲೆಗಳನ್ನು ಪರಿಹಾರ ಮಾಡಲು ತಮ್ಮ ಖರ್ಚಿನಿಂದಲೇ ಬೇಕಾದ ಸೌಕರ್ಯಗಳನ್ನು ರೈತನಿಗೆ ಒದಗಿಸಿ ಕೊಡಬೇಕು ಎನ್ನುವ ಸದುದ್ದೇಶದಿಂದ ಕೂಡಿರಬೇಕು. ಸೆಲೆಕ್ಟ್ ಕಮಿಟಿಯವರಾದರೂ ಈ ಪ್ರಶ್ನೆಯನ್ನು ವಿಮರ್ಶೆ ಮಾಡಬೇಕಾಗಿತ್ತು. ಯಾವುದಾದರೂ ಕಾಯಿಲೆ ಬಂದು ಬೆಳೆ ಹಾಳಾಗುತ್ತಿದ್ದರೆ ಅದನ್ನು ತಿಳಿದುಕೊಂಡು ಅದಕ್ಕೆ ತಕ್ಕ ಪರಿಹಾರವನ್ನು ಸರ್ಕಾರದವರು ಒದಗಿಸಿಕೊಡಬೇಕೇ ವಿನಾ ಗಾಯದ ಮೇಲೆ ಉಪ್ಪು ಹಾಕಬಾರದು. ಹಾಗೆ ಕ್ರಿಮಿಕೀಟಾದಿಗಳಿಂದ ನಷ್ಟವನ್ನು ಅನುಭವಿಸುತ್ತಿರುವಾಗ ರೈತರು ಅದರ ಪರಿಹಾರಕ್ಕೆ ತಗಲುವ ವೆಚ್ಚವನ್ನು ವಹಿಸಬೇಕು ಎಂದು ಹೇಳುವುದು ಅಷ್ಟು ಉಚಿತವಲ್ಲ. ಜನಗಳಿಗೆ ಖಾಯಿಲೆ ಬಂದರೆ ಸರ್ಕಾರದವರೇ ಔಷಧಿ ತರಿಸಿಕೊಟ್ಟು ಔಷಧಿ ತೆಗೆದುಕೊಳ್ಳಲಿ ಎಂದು ಅದಕ್ಕಾಗಿ ಸರಕಾರಿ ಆಸ್ಪತ್ರೆಗಳನ್ನು ಇಟ್ಟಿದ್ದಾರೆ. ಪ್ರತಿಯೊಂದು ತರಹ ಖಾಯಿಲೆಗೂ ಪ್ರತ್ಯೇಕವಾದ ಆಸ್ಪತ್ರೆಗಳನ್ನು

ತೆರೆದಿದ್ದಾರೆ, ಪ್ಲೇಗು, ಕಾಲರಾ ಬಂದರೆ ಅದು ಬರದಂತೆ ಚುಚ್ಚುಮದ್ದನ್ನು ಹಾಕುತ್ತೀರಿ. ಇದಕ್ಕೆ ಸಾರ್ವಜನಿಕ ವೃತ್ತಿಗಳಿಂದ ಹಣವನ್ನು ತೆಗೆದುಕೊಳ್ಳುತ್ತೀರಾ? ಹಣವನ್ನು ಕೊಟ್ಟರೆ ಮಾತ್ರ ಪರಿಹಾರ ಕಾರ್ಯಗಳನ್ನು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳುತ್ತೇವೆಂದು ಹೇಳುವುದಿಲ್ಲ. ಅದೇ ರೀತಿಯಾಗಿ ರೈತರ ಜಮೀನಿನಲ್ಲಿರುವ ಬೆಳೆಗಳಿಗೆ ಬರುವ ಕ್ರಿಮಿಕೀಟಾದಿಗಳ ಹಾವಳಿಯನ್ನು ತಪ್ಪಿಸುವುದಕ್ಕೆ ಸಾರ್ವಜನಿಕ ಹಣವನ್ನು ವೆಚ್ಚ ಮಾಡಿ ರೈತನಿಗೆ ಬಂದಿರುವ ಕಷ್ಟವನ್ನು ಪರಿಹಾರ ಮಾಡದೆ, ಹಣವನ್ನು ಕಡ್ಡಾಯವಾಗಿ ವಸೂಲು ಮಾಡಿ ಬೆಳೆ ಹಾಳಾಗದಂತೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದು ಸರಿಯಲ್ಲ, ನ್ಯಾಯವೂ ಅಲ್ಲ ಧರ್ಮವೂ ಅಲ್ಲ.

ರೈತನು ಸಹಕಾರ ಕೊಡಬೇಕಾದರೆ, ಆ ಕ್ರಮ ಅವನಿಗೆ ಒಳ್ಳೆಯದಿರಬೇಕು. ಅವನ ಜಮೀನಿನಲ್ಲಿ ಕೀಟ ಕಾಯಿಲೆ ಇದ್ದರೆ ಅವನು ಸಹಕಾರವನ್ನು ಕೊಟ್ಟೇ ಕೊಡುತ್ತಾನೆ. ವ್ಯವಸಾಯ ಇಲಾಖೆಯವರು ಔಷಧಿ ಹಾಕುವುದಕ್ಕೆ ಹೋದಾಗ ತಾಂತ್ರಿಕ ಸಿಬ್ಬಂದಿಯವರಿಗೆ ತನ್ನಿಂದಾಗುವ ಸಹಕಾರವನ್ನು ಕೊಟ್ಟೇ ಕೊಡುತ್ತಾನೆ. ಅದರಿಂದ ಅವನಿಗೆ ಲಾಭವಿದೆ ಆದರೆ ಆ ರೀತಿಯ ಸಹಕಾರವನ್ನು ಒತ್ತಾಯ ಮಾಡಿ 7 ದಿವಸಗಳವರೆಗೆ ಅವನಿಂದ ಸೇವೆ ತೆಗೆದುಕೊಳ್ಳುವುದಕ್ಕೆ ಕಾನೂನಿನ ಪ್ರಕಾರ ಅವಕಾಶ ಮಾಡಿಕೊಟ್ಟಿರುವುದು ಮಾನ್ಯ ಕೆ. ಎಚ್. ಪಾಟೀಲ್ ಅವರು ಹೇಳಿದ ಹಾಗೆ ದುರುದ್ದೇಶಪೂರಿತ ಸಾಧನೆಗೆ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ನಾನು ಈ ಮಸೂದೆಯನ್ನು ವಿರೋಧಿಸಿ, ಮಾನ್ಯ ನಂಜೇಗೌಡರು ತಂದಿರುವ ತಿದ್ದುಪಡಿಗೆ ನನ್ನ ಬೆಂಬಲವನ್ನು ಕೊಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಸ್ವಾಮಿ, ಇದರಲ್ಲಿ ಮೊದಲು ಒಂದು ಅಂಶವನ್ನು ತಮ್ಮ ಗಮನಕ್ಕೆ ತಂದು ನಂತರ ಎರಡು ಮಾತುಗಳನ್ನು ಹೇಳಬೇಕಾಗಿದೆ. ಸೆಲೆಕ್ಟ್ ಕಮಿಟಿಯಲ್ಲಿ ನಾನು ಒಬ್ಬ ಸದಸ್ಯನಾಗಿದ್ದೆ ಎಂದು ಇದರಲ್ಲಿ ನಮೂದಿಸಿದೆ. ನನಗೆ ಗೊತ್ತಿದ್ದ ಹಾಗೆ ಸೆಲೆಕ್ಟ್ ಕಮಿಟಿ ಮೀಟಿಂಗ್ ಇದೆ ಎಂದು ನೋಟೀಸ್ ನನಗೆ ಬಂದಿಲ್ಲ. ಸೆಲೆಕ್ಟ್ ಕಮಿಟಿಗಳಲ್ಲಿ ನಾನು ಹಾಜರಾಗಿಲ್ಲ. ಆದುದರಿಂದ ಈ ತಳಹದಿಯ ಮೇಲೆ ಒಂದೆರಡು ಮಾತುಗಳನ್ನು ಈ ಮಸೂದೆಯ ವಿಚಾರದಲ್ಲಿ ಹೇಳಬೇಕಾಗಿದೆ.

ಮಾನ್ಯ ಸ್ನೇಹಿತರಾದ ಶ್ರೀಮಾನ್ ಕೆ. ಎಚ್. ಪಾಟೀಲರು ಏನು ಕೆಲವು ವಿಷಯಗಳನ್ನು ಹೇಳಿದರು ಅದನ್ನು ಅವರು ತಮ್ಮ ಸ್ವಂತ ಅನುಭವದಿಂದ ಹೇಳಿದ್ದಾರೆ. ಅವರು ಸ್ವತಃ ವ್ಯವಸಾಯಗಾರರು, ಕೈ ಮುಟ್ಟಿ ವ್ಯವಸಾಯ ಮಾಡುತ್ತ ವ್ಯವಸಾಯಗಾರರ ಕಷ್ಟಗಳೇನಿವೆ, ಅವರ ತೊಂದರೆಗಳೇನಿವೆ ಎನ್ನುವುದನ್ನು ತಿಳಿದುಕೊಂಡು ಅವರು ನಮ್ಮೆಲ್ಲರಿಗೂ ಮನದಟ್ಟಾಗುವ ರೀತಿಯಲ್ಲಿ ಈ ಕಾನೂನನ್ನು ಶಾಸನವಲ್ಲಿ ತಂದರೆ ಆಗ ಇದರ ದುಷ್ಪರಿಣಾಮವೇನಾಗುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಸರ್ಕಾರದವರಲ್ಲಿ ನಾನು ಒಂದು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ ಇದನ್ನು ನೀವು ಶಾಸನ ಕಡತಕ್ಕೆ ಸೇರಿಸುವುದಕ್ಕಿಂತ ಮುಂಚೆ ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕು. ಇದರ ದುಷ್ಪರಿಣಾಮ ಎಷ್ಟರಮಟ್ಟಿಗೆ ಆಗುತ್ತದೆ, ಇದನ್ನು ಮಾಡಿರತಕ್ಕ ರೀತಿ ನೀತಿ ಸರಿಯಾಗಿದೆಯೇ, ಆ ರೀತಿ ಏನಾದರೂ ಕಾಯಿಲೆಗಳು ಬರಬೇಕಾದರೆ ಅದಕ್ಕೆ ರೈತನೇ ನಾದರೂ ಮುಖ್ಯನಾದವನೇ, ಅವನು ಮಾಡತಕ್ಕ ಕಾರ್ಯದಿಂದೇನಾದರೂ ಬಂದಿದೆಯೇ ಅಥವಾ ನನ್ನ ಮಾನ್ಯ ಸ್ನೇಹಿತರಾದ ನಂಜೇಗೌಡರು ಹೇಳಿದ ಹಾಗೆ ಏನಾದರೂ ಕಾರಣಗಳಿಂದ ಕಾಯಿಲೆಗಳು ಬರುತ್ತವಲ್ಲ, ಅದಕ್ಕೆ ರೈತನು ಎಷ್ಟರಮಟ್ಟಿಗೆ ಕಾರಣನಾದಾನು, ಶಾಸನದಿಂದ ಒಂದು ಒತ್ತಡವನ್ನು ರೈತನ ಮೇಲೆ ಹೇರುವುದು ಸಾಧ್ಯವೇ, ವೆಲ್‌ಫೇರ್ ಸ್ಟೇಟ್ ಎಂದು ಹೇಳುವಾಗ ಅಂಥ ರೋಗರುಜಿನಗಳನ್ನು ತಡೆಗಟ್ಟತಕ್ಕುದು ಸರ್ಕಾರದ ಕರ್ತವ್ಯವಲ್ಲವೇ ಎನ್ನುವುದನ್ನು ಮೂಲಭೂತವಾಗಿ ಯೋಚನೆ ಮಾಡಬೇಕಾಗಿದೆ. ಉದಾಹರಣೆಗೆ ಹೇಳಬೇಕಾದರೆ ಒಂದು ನಗರದಲ್ಲಿ ಕಾಲರ ಅಥವಾ ಪ್ಲೇಗ್ ಬಂತು ಎಂದು, ಇಟ್ಟುಕೊಳ್ಳೋಣ. ಆವಾಗ ಈ ರೋಗಗಳನ್ನು ತಡೆಗಟ್ಟಲು ನಿಮ್ಮ ಮನೆ ಖರ್ಚಿನಿಂದಲೇ ನೀವೆಲ್ಲ ಏನೇನು ಔಷಧಿ ಬೇಕು ಅದನ್ನೆಲ್ಲ ಸ್ವತಃ ನೀವೇ ತಂದುಕೊಡಿ ಎಂದರೆ ಎಷ್ಟು ಜನ ನಿಮ್ಮ ಮಾತಿಗೆ ಬೆಲೆ ಕೊಟ್ಟಾರು? ಆ ರೀತಿ ಬಂದ ರೋಗಗಳನ್ನು ತಡೆಗಟ್ಟುವುದು ನಿಮ್ಮ ಕರ್ತವ್ಯವಲ್ಲವೇ, ಆ ರೀತಿ ನೀವು ಮಾಡುವುದಿಲ್ಲವೇ? ಅಂಥದ್ದರಲ್ಲಿ ಪ್ರಕೃತಿ ನಿಯಮದಿಂದ ಅಥವಾ ಬೇರೆ ಕಾರಣದಿಂದ ಬಂದಂಥ ಕಾಯಿಲೆಯನ್ನು ತಡೆಗಟ್ಟಬೇಕಾಗಿರುವ ನಿಮ್ಮ ಕರ್ತವ್ಯವನ್ನು ರೈತನ ಮೇಲೆ ಶಾಸನಬದ್ಧವಾಗಿ ಹೇಗೆ ಹೇರುತ್ತೀರಿ? ಇದು ಸಾಧ್ಯವೇ? ಶಾಸನದಿಂದ ಅದನ್ನು ತಡೆಗಟ್ಟುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ಇದು ಒಂದು ಹುಚ್ಚು ಸಲಹೆ ಎಂದು ಹೇಳಿದರೆ ತಪ್ಪಾಗಲಾರದು. ಈ ರೀತಿ ಯಾರು ಸಲಹೆ ಕೊಟ್ಟರೋ ಶಾಸನದಿಂದ ರೈತನ ಮೇಲೆ ಹಾಕಿ, ರೈತನೇ ಇದನ್ನು ತಡೆಗಟ್ಟಬೇಕು, ಅವನಿಂದ ತಡೆಗಟ್ಟುವುದಕ್ಕೆ ಸಾಧ್ಯ ಎನ್ನುವ ಅಭಿಪ್ರಾಯವನ್ನು ಯಾರು ಕೊಟ್ಟರೋ ನನಗಂತೂ ತಿಳಿಯದಾಗಿದೆ.

(ಶ್ರೀ ಎಚ್. ಸಿದ್ದವೀರಪ್ಪ)

ನಾನು ಹೋದ ಸಾರಿ ಒಂದು ವಿಷಯವನ್ನು ಹೇಳಿದೆ. ನಮ್ಮ ಕ್ಷೇತ್ರದಲ್ಲಿ ಬಹಳ ಕಷ್ಟಪಟ್ಟು ರೈತರು ಸಾವಿರಾರು ರೂಪಾಯಿ, ಲಕ್ಷಾಂತರ ರೂಪಾಯಿ ಗೊಬ್ಬರ ಹಾಕಿ ಬತ್ತದ ಫಸಲನ್ನು ಇಟ್ಟರು. ಬೆಳೆ ಚೆನ್ನಾಗಿ ಬಂದಿತ್ತು. ಹೊಡೆ ಒರುವ ಕಾಲದಲ್ಲಿ ಇಲಿಗಳು ಹಾವಳಿ ಮಾಡಿದುವು. ಅವುಗಳಿಗೆ ಬುದ್ಧಿ ಬಹಳ ಜಾಸ್ತಿ. ಹುಲಿಯನ್ನು ಹೊಡೆಯಬಹುದು, ಇಲಿಯನ್ನು ಹೊಡೆಯುವುದು ಕಷ್ಟ ಎಂದು ಹೇಳುತ್ತಾರೆ. ಅವು ಏನು ಮಾಡುತ್ತಿದ್ದುವು ಎಂದರೆ ಹೊಡೆ ಬಂದಾಗ ತಿನ್ನುವುದಕ್ಕೆ ಷುರು ಮಾಡಿದುವು. ಇದನ್ನು ಯಾವ ರೀತಿ ತಡೆಗಟ್ಟುವುದು ಎಂದು ಗೊತ್ತಾಗಲಿಲ್ಲ. ಯಾವ ಯಾವ ಔಷಧಿ ಇದೆಯೋ ಅದನ್ನೆಲ್ಲ ತೆಗೆದುಕೊಂಡು ಹಾಕಿದರೂ ಅವುಗಳಿಗೆ ಇಮ್ಯೂನಿಟಿ ಬರುತ್ತಿತ್ತು. ಏನು ಮಾಡಿದರೂ ಅವು ಸಿಕ್ಕುತ್ತಿರಲಿಲ್ಲ. ಅವು ಬಿಲ ಮಾಡಿಕೊಂಡು ಅಲ್ಲಲ್ಲೇ ಸೇರಿಕೊಳ್ಳುತ್ತಿದ್ದುವು. ಈ ರೀತಿಯಾಗಿ ನಾನು ನೋಡಿದ ಹಾಗೆ ಸಾವಿರಾರು ಎಕರೆ ಜಮೀನಿನಲ್ಲಿದ್ದ ಬತ್ತದ ಫಸಲು ಲುಕ್ಸಾನಾಯಿತು. ವ್ಯವಸಾಯ ಇಲಾಖೆಗೆ ಬರೆದು ಇಲಿಗಳನ್ನು ನಾಶ ಮಾಡಲು ಬೇಕಾಗುವ ಔಷಧಿಯನ್ನು ಕೊಡಿರಿ ಎಂದು ಕೇಳಿದಾಗ ಇಲಿಗಳನ್ನು ಕೊಲ್ಲತಕ್ಕ ಔಷಧಿಯನ್ನು ಸಾಕಷ್ಟು ಪ್ರಮಾಣದಲ್ಲಿ ಕೊಡತಕ್ಕ ಶಕ್ತಿ ಅವರಿಗೆ ಇರಲಿಲ್ಲ. ಇಲಾಖೆಗಳನ್ನು ನೋಡಿದರೆ ಅವು ಬೃಹದಾಕಾರವಾಗಿ ಬೆಳೆಯುತ್ತಿವೆ. ವ್ಯವಸಾಯ ಇಲಾಖೆಯು ಒಂದಕ್ಕೆ 2ರಷ್ಟು ಬೆಳೆದಿದೆ. ವ್ಯವಸಾಯ ಇಲಾಖೆ ಒಂದೇ ಅಲ್ಲ ಎಲ್ಲ ಇಲಾಖೆಗಳೂ ಇದೇ ರೀತಿ ಬೆಳೆದಿವೆ. ಇಲಾಖೆಗಳ ಬೆಳವಣಿಗೆಯಾಗಿದೆಯೇ ಹೊರತು ಅದರಿಂದ ರೈತರಿಗೆ ಏನಾದರೂ ಅನುಕೂಲವಾಗತಕ್ಕ ರೀತಿಯಿಂದ ನಡೆದಿದೆಯೇ ಎಂದು ನೋಡಿದರೆ ಬಹಳ ಶೋಚನೀಯವಾದ ಸ್ಥಿತಿ ಇದೆ ಎಂದು ನಾವು ಹೇಳಬೇಕಾಗುತ್ತದೆ. ರೈತರನ್ನು ಇಷ್ಟರಮಟ್ಟಿಗೆ ತೊಂದರೆಗೆ ಈಡು ಮಾಡಿರತಕ್ಕ ರಾಷ್ಟ್ರಗಳು ಎಂದರೆ ಬಹುಶಃ ಟೋಟಲಿಟೇರಿಯನ್ ಸ್ಟೇಟ್ಸ್ ಇರಬಹುದೇ ಹೊರತು ಪ್ರಜಾಪ್ರಭುತ್ವವಿರತಕ್ಕ ರಾಷ್ಟ್ರಗಳಲ್ಲಿ ಎಲ್ಲಿಯೂ ಈ ರೀತಿ ಇಲ್ಲ. ಅಮೆರಿಕಾದಲ್ಲಾಗಲೀ, ಇಂಗ್ಲೆಂಡಿನಲ್ಲಾಗಲೀ, ಇನ್ನು ಯಾವುದೇ ರಾಷ್ಟ್ರಗಳಲ್ಲಾಗಲೀ ಈ ರೀತಿ ಏನಾದರೂ ಕಾಯಿಲೆ ಬಂದರೆ ಅದನ್ನು ನಿವಾರಣೆ ಮಾಡಿ ಮುಂದೆ ಅದು ಬರದಂತೆ ತಡೆಗಟ್ಟುವುದು ಸರ್ಕಾರದ ಕರ್ತವ್ಯ. ಆ ಕರ್ತವ್ಯವನ್ನು ಬಿಟ್ಟು ರೈತರ ಮೇಲೆ ಹಾಕಿ, ರೈತರೇ ಅದನ್ನು ಮಾಡಬೇಕು ಎಂದು ಅದಕ್ಕೆ ಕಾನೂನು ಬೇರೆ ಮಾಡುತ್ತಿದ್ದೀರಿ. ರೈತನ ಸ್ಥಿತಿ ಏನು ಎನ್ನುವುದನ್ನು ನೋಡಬೇಕು. ರೈತನಿಗೆ ಹೊಟ್ಟೆಗೇ ಹಿಟ್ಟಿಲ್ಲದೇ ಇರುವಾಗ ಅವನು ಇದಕ್ಕೆಲ್ಲ ಎಲ್ಲಿಂದ ದುಡ್ಡು ತರುತ್ತಾನೆ? ನೂರಕ್ಕೆ 80 ಜನ ರೈತರಿರುವ ನಮ್ಮ ರಾಜ್ಯದಲ್ಲಿ ಇಂಥ ಕಾನೂನು ತರುವುದು ಶುದ್ಧ ಮೂರ್ಖತನ, ಅವಿವೇಕದ ಪರಮಾವಧಿ ಎಂದು ಹೇಳಿದರೂ ತಪ್ಪಾಗಲಾರದು. ಆದುದರಿಂದ ಈಗಲಾದರೂ ನಾನು ಹೇಳುತ್ತೇನೆ, ನೀವು ಈ ಕಾನೂನನ್ನು ಶಾಸನ ಕಡತದಲ್ಲಿಟ್ಟರೂ ಇದನ್ನು ಜಾರಿಗೆ ಕೊಡತಕ್ಕ ಶಕ್ತಿ ಇಲ್ಲ, ಜಾರಿಗೆ ಕೊಡುವುದಕ್ಕೆ ನಿಮ್ಮ ಕೈಯಿಂದ ಆಗುವುದಿಲ್ಲ.

5-00 P.M.

ನೀವು 10 ವರ್ಷದಲ್ಲಿ ಏನೇನು ಶಾಸನಗಳನ್ನು ಮಾಡಿದ್ದೀರಿ ಅಷ್ಟು ಶಾಸನಗಳನ್ನೂ ಜಾರಿಗೆ ಕೊಡದೆ ಹಾಗೆ ಹಳೆ ಕಡತದಲ್ಲಿಟ್ಟು ಇಲಿಗಳು ತಿಂದು ಹಾಗೆಯೇ ಹಾಳಾಗಿವೆ. ಈ ರೀತಿಯಿಂದ ಯಾವುದೋ ಒಂದು ಕಾನೂನನ್ನು ಕೈಯಲ್ಲಿ ಇಟ್ಟುಕೊಂಡು ಒಂದು ವರ್ಗದವರು ಹೇಳಿದಹಾಗೆ ಕೇಳಬೇಕು ಎನ್ನುವ ಆಸೆಯಿಂದ ಮಾಡತಕ್ಕ ಶಾಸನಗಳನ್ನು ಏನಾದರೂ ಮಾಡಿ ಉಪಯೋಗಿಸಬೇಕು ಎಂದು ಮನಸ್ಸಿನಲ್ಲಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈಗ ಜನಗಳು ಬಹಳ ಹುಷಾರಾಗಿದ್ದಾರೆ. ರೈತನು ಕಷ್ಟಪಟ್ಟು ಬೆಳೆದ ಧಾನ್ಯವನ್ನು ಕಳೆದುಕೊಳ್ಳುವುದಕ್ಕೆ ಇಷ್ಟಪಡುತ್ತಾನೆಯೇ ? ಯಾವ ಮನುಷ್ಯನು ತಾನೇ ಬಂದಿರತಕ್ಕ ಹುಳಗಳನ್ನು ತೆಗೆಯುವುದಿಲ್ಲ ಎಂದು ಹೇಳುತ್ತಾನೆ. ಗಿಟ್ಟಿ ಹುಳಗಳು ಬರುತ್ತದೆ. ಹುಳಗಳನ್ನು ಮಕ್ಕಳು, ಹೆಂಗಸರೂ ಎಲ್ಲರೂ ಸೇರಿ ಮನೆಯಲ್ಲಿ ಬಟ್ಟೆಯಲ್ಲಿ ಹಿಡಿದು ಸುಡುತ್ತಾರೆ. ಇದನ್ನು ನಿಮ್ಮ ಕಾಯಿದೆ ಇಲ್ಲದೇ ಮಾಡುತ್ತಾರೆ, ಅದು ಬಿಟ್ಟು ಈ ರೀತಿ ಕಾನೂನು ಮಾಡಿದರೆ ಯಾವ ಪುಣ್ಯವೂ ಇಲ್ಲ, ಪುರುಷಾರ್ಥವೂ ಇಲ್ಲ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಈ ಕಾನೂನನ್ನು ಶಾಸನಕ್ಕೆ ಏರಿಸುವುದಕ್ಕಿಂತ ಮುಂಚೆ ಬಹಳ ದಿವಸ ಯೋಚನೆ ಮಾಡಬೇಕು. ಇದು ಸರ್ಕಾರದ ಆದ್ಯ ಕರ್ತವ್ಯ. ಇವತ್ತಿನ ದಿವಸ ನಾವು ನೋಡುತ್ತಾ ಇದ್ದೇವೆ. ನಮ್ಮ ಮೈಸೂರಿನಲ್ಲಿರುವ ಫಾರೆಸ್ಟಿನಲ್ಲಿ ಗಂಧದ ಮರಕ್ಕೆ ಬರುವ ರೋಗವನ್ನು ನಿಮ್ಮ ಕಂಟ್ರೋಲ್‌ನಲ್ಲಿ ಇಡುವುದಕ್ಕೆ ಸಾಧ್ಯವಿಲ್ಲ. ಇದರಿಂದಾಗಿ ಗಂಧದ ಮರಕ್ಕೆ ರೋಗ ಬಂದು ಇಡೀ ಗಂಧದ ಐಶ್ವರ್ಯ ನಾಶವಾಗುತ್ತಾ ಇದೆ ಎಂದು ಪತ್ರಿಕೆಯಲ್ಲಿ ಓದಿದಾಗ ನನಗೆ ಕಣ್ಣೀರು ಇಡುವ ಪರಿಸ್ಥಿತಿ ಬಂತು.

ಇನ್ನೇ ಕಂಟ್ರೋಲ್ ಮಾಡದೇ ಇರುವಾಗ ಗದ್ದೆಯಲ್ಲಿ ಇರುವ ಮರಕ್ಕೆ ಹುಳ ಬಿದ್ದಿದೆ ಎಂದರೆ ಹೇಗೆ ತಡೆಯುತ್ತೀರಿ ? ಅದೇ ರೀತಿ ಮರಗಳಿಗೆ ಸಾವಿರಾರು ಕಾಯಿಲೆಗಳು ಬರುತ್ತವೆ. ಇದರಿಂದ ಜನರನ್ನು ರೇಗಿಸುವುದು ಒಳ್ಳೆಯದಲ್ಲ. ಫ್ಯಾಕ್ಟರಿಯಲ್ಲಿ ಏನಾದರೂ ಘೇರಾವೋ ಮಾಡಿದರೆ ನಿಮ್ಮ ಕೈಯಲ್ಲಿ ತಡೆಯುವುದಕ್ಕೆ ಸಾಧ್ಯವಿಲ್ಲ. ಇನ್ನು 100ಕ್ಕೆ 80 ಜನರು ಇರ ವ ರೈತರು ಒಂದು ತಿಂಗಳು ಘೇರಾವೋ ಮಾಡಿದರೆ ಹೊಟ್ಟೆಗಿಲ್ಲದೇ ಸತ್ತು ಹೋಗಬೇಕಾಗುತ್ತದೆ. ಹೀಗಿರುವಾಗ ಏತಕ್ಕೋಸ್ಕರ ಕಾನೂನು ಮಾಡುತ್ತೀರಿ ? That government is the best which is least governed. ಅದರಿಂದ ಏನೂ ಸಾಧನೆಯಾಗುವುದಿಲ್ಲ. ಇದನ್ನು ಬಹಳ ದೀರ್ಘವಾಗಿ ಯೋಚನೆ ಮಾಡಿ; ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪುನಃ ಹಾಕಬೇಕು. ಈಗ ಇರತಕ್ಕ ರೀತಿಯಲ್ಲಿ ಖಂಡಿತ ತರಕೂಡದು. ಯಾವ ರೋಗ ರುಜಿನಗಳನ್ನು ಶಾಸನದಿಂದ ತಡೆಯಬೇಕೆಂದು ಇಟ್ಟು ಕೊಂಡಿದ್ದೀರೋ ಅದು ಶಾಸನದಿಂದ ನಡೆಯುವುದಿಲ್ಲ ಜನಗಳಿಗೆ ತಿಳುವಳಿಕೆಯಾಗುವಂತೆ ನಿಮ್ಮ ಇಲಾಖೆಯವರು ಮನೆ ಮನೆ ಬಾಗಿಲಿಗೂ ಹೋಗಿ ದಾರಿ ತೋರಿಸಿದರೆ ನಮ್ಮ ರೈತರು ಮಾಡುವುದಕ್ಕೆ ಸಿದ್ಧರಿದ್ದಾರೆ. ರೈತರು ಅಷ್ಟು ದಡ್ಡರೇನೂ ಅಲ್ಲ ಯಾವ ಹಳ್ಳಿಗೆ ಹೋಗಿ ಇನ್‌ಸೆಕ್ಟಿಸೈಡ್ ಮತ್ತು ಮದ್ದು ಹೊಡೆಯಲಿಕ್ಕೆ ಎಲ್ಲಾ ಸಾಮಗ್ರಿಗಳನ್ನೂ ಇಟ್ಟುಕೊಂಡಿದ್ದಾರೆ. ಆದುದರಿಂದ ಈ ಕಾನೂನನ್ನು ತರುವುದು ಸೂಕ್ತವಲ್ಲ. ದಯವಿಟ್ಟು ಇದನ್ನು ಜಾಯಿಂಟ್ ಕಮಿಟಿಗೆ ಕಳುಹಿಸ ಬೇಕಾದುದು ಉತ್ತಮ. ಹಾಗೆ ಯೋಚನೆ ಮಾಡದೆ ಇದನ್ನು ಬಿಟ್ಟು ಬಿಟ್ಟರೆ ದೇಶಕ್ಕೆ ದೊಡ್ಡ ಉಪಕಾರ ಮಾಡಿ ದಂತಾಗುತ್ತದೆ. ಆದುದರಿಂದ ಇದನ್ನು ಬಲವಾಗಿ ವಿರೋಧಿಸುತ್ತೇನೆ.

ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಸ್ವಾಮಿ, ಮಾನ್ಯ ಸಭಾಪತಿಗಳೇ, ಈಗ ನಮ್ಮ ಉಪಸಚಿವರು ತಂದಿರತಕ್ಕ ಬಿಲ್ಲು ಏನು ಇದೆ. ಮೈಸೂರು ಅಗ್ರಿಕಲ್‌ಚರ್ ಪೆಸ್ಟ್ಸ ಅಂಡ್ ಡಿಸೀಸ್ ಬಿಲ್ಲನ್ನು ನಾನು ಬೆಂಬಲಿಸುತ್ತೇನೆ. ಈ ಬಿಲ್ಲು ಸೆಲೆಕ್ಟ್ ಕಮಿಟಿಗೆ ಹೋಗಿ ಅನೇಕ ಸೂಚನೆಗಳನ್ನು ಮಾರ್ಪಡಿಸಿದೆ. ಅದುದರಿಂದ ಈ ಬಿಲ್ಲಿನಲ್ಲಿ ತೊಂದರೆಗಳು ಕಡಿಮೆಯಾಗಿ ಅವಶ್ಯವಾಗಿ ಜನರಿಗೆ ಏನು ಒಂದು ತಿಳುವಳಿಕೆ ಆಗುವ ರೀತಿಯಲ್ಲಿ ಇರಬೇಕೋ, ಆ ರೀತಿಯಲ್ಲಿ ಬಿಲ್ಲು ಬಂದಿದೆ. ಅದನ್ನು ವಿರೋಧಿಸುವುದು ಅಷ್ಟು ಸೂಕ್ತವಲ್ಲ ಎಂದು ನನಗೆ ಅನಿಸುತ್ತದೆ. ನಾವು ವ್ಯವಸಾಯಗಾರರು, ವ್ಯವಸಾಯ ಮಾಡುತ್ತೇವೆ. ಹೈಬ್ರೀಡನ್ನು ಹೆಚ್ಚು ಬೆಳೆ ಬೆಳೆಯುವವರಿಗೆ ಅದರ ಉಪಯುಕ್ತತೆ ಯನ್ನು ಕೊಟ್ಟು ರೋಗ ಕಡಿಮೆಯಾಗುತ್ತದೆ. ಭೂಮಿಗೆ ಸರಿಯಾಗಿ ಔಷದಿ ಹೊಡೆಯಿರಿ ಎಂದು ಹೇಳಿದರೆ ಅವರು ಸುಮ್ಮನೆ ಕೂತಿರುತ್ತಾರೆ, ಆದ್ದರಿಂದ ಅವರಿಗೆ ಎಚ್ಚರಿಕೆಯನ್ನು ಕೊಡುವ ರೀತಿ ಯಲ್ಲಿ ಈ ಬಿಲ್ಲು ಇದೆ. ಅದಕ್ಕಾಗಿ ಈ ಬಿಲ್ಲಿಗೆ ನಾವೆಲ್ಲರೂ ಬೆಂಬಲ ಕೊಡುವುದು ಸೂಕ್ತ. 4-8 ಜನರು ಈ ಹೈಬ್ರಿಡ್ ರೋಗ ರುಜಿನದ ಪ್ರಶ್ನೆಯಲ್ಲಿ ಒಂದು ದೃಷ್ಟಿಯನ್ನಿಟ್ಟುಕೊಂಡು ಈ ಔಷಧಿ ಹೊಡೆಯ ಬೇಕು ಎಂದು ಎಚ್ಚರಿಕೆ ಮಾಡುವಾಗ ಯಾರಾದರೂ ಒಬ್ಬರು ವಿರೋಧಮಾಡಿ ಅಲ್ಲ ಹೊಡೆಯು ವುದಿಲ್ಲ ಎಂದರೆ ಸರ್ಕಾರಕ್ಕೆ ಏನೂ ಮಾಡಲಿಕ್ಕೆ ಬರುವುದಿಲ್ಲ. ಆಗ ಅವರಿಗೆ ಎಚ್ಚರ ಮಾಡುವ ಪ್ರಸಂಗ ಬರುತ್ತದೆ. ಅಂತಹ ಸಂದರ್ಭದಲ್ಲಿ ಮೊಂಡುತನದಿಂದ ಕೆಲಸ ಮಾಡುವವರಿಗೆ ಎಚ್ಚರಿಕೆ ಕೊಡಲು ಈ ಬಿಲ್ಲಿನ ಅವಶ್ಯಕತೆ ಇದೆ. ರೈತರಲ್ಲಿ ಇಂತಹ ವಿಚಾರದಲ್ಲಿ ಸಾಕಷ್ಟು ತಿಳುವಳಿಕೆ ಇಲ್ಲ. ಸರ್ಕಾರದವರು ಈ ಹೈಬ್ರೀಡಿನ ರೋಗ ರುಜಿನಗಳಿಗಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಾ ಇದ್ದರೂ ಅದರ ಉಪಯುಕ್ತತೆಯನ್ನು ಇನ್ನೂ ಕಂಡು ಕೊಂಡಿಲ್ಲ. ಕೆಲವು ಮಟ್ಟಿಗೆ ಜ್ಞಾನ ಬರಬೇಕು ಎಂದು ಈ ಬಿಲ್ಲನ್ನು ಮಾಡಿದೆ, ನನ್ನ ಪೀಕು ಹಾಳಾಗುತ್ತದೆ ಎಂದು ಏನೂ ಮಾಡದೆ ಸುಮ್ಮನೆ ಕೂತರೆ ಏನೂ ಪ್ರಯೋಜನವಿಲ್ಲ. ಆದುದರಿಂದ ಈ ಕೆಲಸವನ್ನು ಖಡ್ಡಾಯವಾಗಿ ಮಾಡಬೇಕು ಎನ್ನುವ ಭಾವನೆ ಮತ್ತು ಉತ್ಪನ್ನ ಹೆಚ್ಚಾಗಬೇಕು ಎನ್ನುವ ಭಾವನೆ ಅವನಲ್ಲಿ ಬರಬೇಕೆಂಬುದೇ ಈ ಬಿಲ್ಲಿನ ಉದ್ದೇಶವಾಗಿದೆ. ಇದನ್ನು ಉತ್ಸಾಹದಿಂದ ಕೆಲಸಮಾಡಬೇಕಾಗಿದೆ, ಆದ್ದರಿಂದ ಈ ಬಿಲ್ ತಂದಂಥಾದ್ದು ಯೋಗ್ಯ ಇದೆ ಎಂದು ಹೇಳಿ ನಾನು ಇದಕ್ಕೆ ಬೆಂಬಲ ಕೊಡುತ್ತೇನೆ.

† ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಈ ಒಂದು ಮೈಸೂರು ಅಗ್ರಿಕಲ್‌ಚರ್ ಪೆಸ್ಟ್ಸ ಅಂಡ್ ಡಿಸೀಸ್ ಬಿಲ್ ತಂದಿರತಕ್ಕಂಥ ಕಾಯಿದೆ ಏನು ಇದೆಯೋ ಅದು ಬಹಳ ಒಳ್ಳೆಯದು ಎಂದು ಕಂಡರೂ ಕೂಡ ಅವರು ಈ ಒಂದು ಕಾಯಿದೆ ಮೂಲಕ ಯಾವ ಒಂದು ದೋಷವನ್ನು ನಿವಾರಣೆ ಮಾಡುವುದಕ್ಕೆ ಹೊರಟಿದ್ದಾರೋ ಅದರ ಒಂದು ಸಫಲತೆ ಈ ಕಾಯಿದೆಯಲ್ಲಿ ಕಾಣಿಸುವುದಿಲ್ಲ ಎಂದು ನನ್ನ ಮನಸ್ಸಿಗೆ ಖಚಿತವಾಗಿದೆ. ಪ್ರಿಯಾಂಬಲ್ ಹೀಗೆ ಹೇಳುತ್ತದೆ :

"Whereas it is expedient to take measures to prevent the introduction, spread or reappearance of pests, plant diseases

(ಶ್ರೀ ಎಲ್. ಶ್ರೀಕಂಠಯ್ಯ)

and various weeds, injurious to crops, plants trees or water supply or obstruction to wateer-ways within the State of Mysore and to make provision for other matters connected therewith ;

ಬಹಳ ಸಂತೋಷ ಆದರೆ ಮಾನ್ಯ ಸಿದ್ಧವೀರಪ್ಪನವರು ಹೇಳಿದ ಹಾಗೆ ನಾವು ವಸ್ತುತಃ ಪರಿಸ್ಥಿತಿ ಹೇಗೆ ಎನ್ನತಕ್ಕದ್ದನ್ನು ಗಮನಿಸಬೇಕು. ಉದಾಹರಣೆಗೆ ನನ್ನ ಗಮನಕ್ಕೂ ಇತ್ತೀಚೆಗೆ ಸರ್ಕಾರದ ಗಮನಕ್ಕೂ ವಿಷಯ ಬಂದಿರಬಹುದು ಎಂದು ನಾನು ತಿಳಿದು ಕೊಂಡಿದ್ದೇನೆ. ಮುಂಗಾರು ಮಳೆ ಆರಂಭವಾದಾಗ ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಕಾಲದಲ್ಲಿ ಜೋಳದ ಬೆಳೆಯನ್ನು ಬಿತ್ತಿದರು. ಮಳೆ ಸ್ವಲ್ಪ ಒದಗಿಸಿ ಕೊಡುವ ಹಾಗೆ ಕಂಡು ಬಂತು. ಜೋಳದ ಸಂಪೂ ಕೂಡ ಬಂತು. ಯಾವ ವರ್ಷವೂ ಆಗದೇ ಇರುವ ಜೋಳ ಈ ವರ್ಷ ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಆಗುತ್ತದೆ ಎಂದು ರೈತರು ನಂಬಿಕೊಂಡಿದ್ದರು. ಆದರೆ ಅದು ಹೊಡೆ ಕಡೆಯುವುದಕ್ಕೆ ಷುರು ಆದಮೇಲೆ ಮಳೆ ಕಡಿಮೆ ಆಯಿತು. ಆದುದರಿಂದ ಸಕಾಲದಲ್ಲಿ ಮಳೆ ಬಾರದೆ ಪ್ರತಿಯೊಂದು ಹೂವು ಕೂಡ ಕಪ್ಪು ಕಾಣಿಕ್ಕೆ ಶುರುವಾಯಿತು. ಕೂಡಲೇ ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟಿನವರಿಗೆ ಜೋಳದ ಬೆಳೆಗೆ ರೋಗ ಬೀಳುತ್ತದೆ. ಅದಕ್ಕೆ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ಮನವರಿಕೆ ಸಲ್ಲಿಸಿದರು. ತಾಲ್ಲೂಕು ಬೋರ್ಡಿನವರು ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಉತ್ತರ ಏನು ಬಂತು ಎಂದರೆ ಇದು ವಿಶಾಲವಾದ ಪ್ರದೇಶ ಚಿಟ್ಟೆ ರೋಗ ಬಂದಿದೆ ಎನ್ನುವುದು ನಮಗೆ ಗೊತ್ತು ಅದರಿಂದ ನಿಮಗೆ ತುಂಬಾ ಅನ್ಯಾಯವಾಗುತ್ತದೆ ಎಂದು ನಾವು ತಿಳಿದು ಕೊಂಡಿದ್ದೇವೆ, ಮತ್ತು ರೈತರಿಗೂ ಬಹಳ ನಷ್ಟವಾಗುತ್ತದೆ. ಆದರೆ ಇನ್ನೂ ಒಂದು ಹೇಳಿದರು. ಇದನ್ನು ಹೋಗಲಾಡಿಸುವುದಕ್ಕೆ ಬೇಕಾದಂಥ ಗೊಬ್ಬರ ರಸಾಯನಿಕ ಪದಾರ್ಥಗಳನ್ನು ಸ್ಟಾಕ್ ಮಾಡಿಟ್ಟಿದ್ದೇವೆ, ಬೇಕಾದರೆ ಕೊಂಡು ಕೊಂಡು ಪರಿಹರಿಸಿಕೊಳ್ಳಿ ಎಂದು. ಆದರೆ ಉಂಟಾದ ಪರಿಸ್ಥಿತಿ ಏನೆಂದರೆ, ಇವತ್ತು ರೈತರ ಆರ್ಥಿಕ ಪರಿಸ್ಥಿತಿಯು ಈ ರಸಾಯನಿಕ ಸಾಧನಗಳನ್ನು ಕೊಂಡು ಕೊಂಡು ಈ ರೋಗವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಡೀ ಮೈಸೂರು ಜಿಲ್ಲೆಯಲ್ಲಿ ಇವತ್ತು ಅರ್ಧದಷ್ಟು ಜೋಳದ ಬೆಳೆಯು ಯಾರಿಗೂ ದೊರಕುತ್ತಾ ಇಲ್ಲ. ಇಲ್ಲಿ ಮುಖ್ಯವಾಗಿ ಒಂದು ವಿಷಯ ಕಂಡುಬರುತ್ತದೆ. ಈಗ ಮನುಷ್ಯನಿಗೆ ತಗಲತಕ್ಕ ಸಾಂಕ್ರಾಮಿಕ ರೋಗ ಬಂದ ಕೂಡಲೇ, ಸರ್ಕಾರದವರು ಇನಾಕ್ಯುಲೇಶನ್, ಮತ್ತು ವೇಕ್ಸಿನೇಶನ್ ಹಾಕಲು ತೀವ್ರ ಕಾರ್ಯಕ್ರಮವನ್ನು ಕೈಕೊಳ್ಳುತ್ತಾರೆ. ಆದರೆ ಇದು ತಿನ್ನುವ ಆಹಾರಕ್ಕೆ ಬರುವಂತಹ ರೋಗ. ಬಹುಶ: ಇವು ಸಾಕಷ್ಟು ಪುಷ್ಟಿಯಾಗಿರುವಂತಹ ಆಹಾರಗಳಿಗೆ ಬರುತ್ತವೆ. ರೈತರು ಸರ್ಕಾರಕ್ಕೆ ಇಂಥ ರೋಗ ಜೋಳದ ಬೆಳೆಗೆ ಬಂದಿದೆ ಎಂದು ಮನವಿ ಮಾಡಿಕೊಂಡರೂ, ರಾಸಾಯನಿಕ ಪದಾರ್ಥಗಳು ಗೋಡಾನಿನಲ್ಲಿ ಬಿದ್ದಿದ್ದರೂ, ಅವನಿಗೆ ದುಡ್ಡು ಕೊಟ್ಟು ತೆಗೆದು ಕೊಂಡು ಹೋಗಿ ಎಂದು ಹೇಳಿದರೆ, ಇವತ್ತು ಅವನ ಆರ್ಥಿಕ ಪರಿಸ್ಥಿತಿಯಲ್ಲಿ ಏನು ಮಾಡಲು ಸಾಧ್ಯ? ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದ ಹಾಗೆ ಸರ್ಕಾರಕ್ಕೆ ಬೆಳೆ ಕಾಪಾಡಬೇಕೆಂಬ ಉದ್ದೇಶ ಇದ್ದರೆ, ಸರ್ಕಾರದವರು ಇನ್ನಿತರ ಸಾಧನದ ಮುಖಾಂತರ ಈ ಜೋಳದ ಬೆಳೆಯ ರಕ್ಷಣೆಯನ್ನು ಮಾಡಬಹುದಿತ್ತು. ನನ್ನ ಜ್ಞಾಪಕದ ಪ್ರಕಾರ, ನಂಜನಗೂಡಿನ ರಸಬಾಳೆ ಗಿಡಗಳಿಗೆ ರೋಗ ತಗಲಿದಾಗ, ಅದಕ್ಕೆ ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳದೆ, ಅವುಗಳು ಸತ್ತು ಹೋಗಲು ಶುರುವಾಯ್ತು. ಇದುವರೆಗೂ ಅದಕ್ಕೆ ಯಾವ ವಿಧವಾದಂತಹ ಒಂದು ಪರಿಹಾರವನ್ನು ಕಂಡು ಹಿಡಿದಿಲ್ಲ. ಇದರಿಂದ ನಂಜನಗೂಡು ರಸಬಾಳೆ ಹಣ್ಣೇ ನಾಶವಾಗುತ್ತಾ ಇದೆ! ಆ ಶ್ರೇಷ್ಠವಾದ ರಸಬಾಳೆಹಣ್ಣು ಹೋಗುತ್ತಾ ಇದೆ. ಇಲ್ಲಿ ನಮೂದು ಮಾಡಿದಂತಹ ಸೆಕ್ಷನ್ 4, ಸೆಕ್ಷನ್ 5, ಸೆಕ್ಷನ್ 7 ಅದನ್ನು ಇಲ್ಲಿ ಸ್ವಲ್ಪ ವಿಮರ್ಶೆಮಾಡಬೇಕಾಗುತ್ತದೆ. ಸೆಕ್ಷನ್ 4ರಲ್ಲಿ ಪವರ್‌ಟು ಇಶ್ಯೂ ಡೈರೆಕ್ಷನ್ಸ್ ಎಂದು ಇದೆ. ಇದು ಹೇಗಿದೆ ಎಂದರೆ ಅನ್ನ ಕೇಳಬೇಡಿ, ಬಟ್ಟೆ ಕೇಳಬೇಡಿ, ಗಿಣಿಯನ್ನು ಸಾಕಿದ ಹಾಗೆ ಸಾಕುತ್ತೇನೆ ಎನ್ನುವ ಹಾಗಿದೆ, ಫ್ರೀಯಾಗಿ ರಸಾಯನಿಕ ಗೊಬ್ಬರ ಕೊಡಿ ಎಂದರೆ, ಅದು ಇಲ್ಲ. ರೋಗ ಬಂತು ಎಂದರೆ, ಅದು ಸರ್ಕಾರದ ಗಮನಕ್ಕೆ ಬರುವುದಿಲ್ಲ. ಅದರಲ್ಲಿ ಏನು ಹೇಳುತ್ತಾರೆಂದರೆ ;

"(1) On the issue of a notification under Section 3, the Depuy Director of Agriculture may, by notice direct every occupier within the affected area to carry out such preventive or remedial measures"

ಇದು ಬಹಳ ಸುಖವಾದ ಕೆಲಸ, ಬೆಂಗಳೂರಿನಲ್ಲಿ ಬಹಳ ಸುಖವಾದ ಏರ್ ಕಂಡಿಶನ್ ರೂಮ್ ಇದೆ. ಅಲ್ಲಿ ರೋಗ ಬಂದಿದೆ ಎಂದು ಹೇಳಿದರೆ ಕೂಡಲೇ ಅದನ್ನು ದಮನ ಮಾಡಬೇಕೆಂದು ಆರ್ಡರ್ ಮಾಡುತ್ತಾರೆ. ಅದರ ಬದಲು, ಸರ್ಕಾರದವರೇ, ಕೆಮಿಕಲ್ಸ್ ಫ್ಯಾಕ್ಟರಿಯವರಿಗೆ ಒಂದು ರಿಕ್ವಿಜಿಶನ್ ಮಾಡಿ, ತಮ್ಮ ಸಿಬ್ಬಂದಿಯೊಡನೆ ಇಂಥ ಪ್ರದೇಶಗಳು ಯಾವುವು ಇವೆ, ಅಲ್ಲಿ ಅದನ್ನು ತಡೆಗಟ್ಟುವ ಒಂದು ಏರ್ಪಾಡನ್ನು, ಒಂದು ವಾರ್ ಬೇಸಿಸ್ ಮೇಲೆ ಮಾಡಿ, ಬೆಳೆಯನ್ನು ರಕ್ಷಣೆ ಮಾಡುತ್ತಾರೋ ಎಂದು ತಿಳಿದುಕೊಂಡಿದ್ದರೆ, ಅದು ಆ ರೀತಿ ಇಲ್ಲ. ಆ ಮೇಲೆ ಸೆಕ್ಷನ್ 5 ರಲ್ಲಿ ಈ ರೀತಿ ಇದೆ :

> "Duties of occupier on the issue of notice under section.4—On the issue of a notice under section 4 (i) it shall be the duty of every occupier within the affected area to carry out the preventive or remedial measures specified in such notice..."

ಮತ್ತು ಸೆಕ್ಷನ್ 7 ಮತ್ತು 9 ರಲ್ಲಿ ನೋಟಿಫಿಕೇಶನ್ ಆದಮೇಲೆ ಒಂದು ಡೈರೆಕ್ಷನ್ ಕೊಟ್ಟಿದ್ದಾರೆ. ರೈತ ಪ್ರಿವೆಂಟಿವ್ ಮೆಜರ್ ತೆಗೆದುಕೊಳ್ಳದೆ ಹೋದರೆ ಅವನಿಗೆ ಶಿಕ್ಷೆ ಬೇರೆ. ಮೊದಲೇ ಗೊಬ್ಬರ ಮುಂತಾದುವುಗಳನ್ನು ಕೊಂಡುಕೊಳ್ಳುವುದಕ್ಕೆ ಚೈತನ್ಯವಿಲ್ಲ. ಅದರ ಮೇಲೆ ಇದೊಂದು ಶಿಕ್ಷೆ, ಶೇಕಡಾ 50 ಕೆಮಿಕಲ್ಸ್ ಉಪಯೋಗಿಸಿದರೆ, 50 ಭಾಗ ಗ್ರೀನ್ಸ್ ಉಪಯೋಗಿಸಬೇಕೆಂದು ಅಗ್ರಿಕಲ್ಚರಲ್ ಸಂಶೋಧನೆಯಿಂದ ಕಂಡುಬರುತ್ತದೆ. ಏಕೆಂದರೆ, ಕೆಮಿಕಲ್ಸ್ ಭೂಮಿಗೆ ತುಂಬಾ ಖಾರವನ್ನು ಉಂಟು ಮಾಡುತ್ತದೆ. ಉತ್ತರೋತ್ತರ ಭೂಮಿಯು ಫರ್ಟಿಲಿಟಿ ಕಡಿಮೆಯಾಗುತ್ತದೆ. ಅದಕ್ಕಾಗಿ ಶೇಕಡಾ 50 ಸೊಪ್ಪನ್ನು ಇದರ ಜೊತೆಗೆ ಭೂಮಿಗೆ ಹಾಕಬೇಕಾಗುತ್ತದೆ. ಇವತ್ತಿನ ದಿವಸ ಈ ಸೊಪ್ಪಿಗೆ ಯಾವುದೂ ಇಲ್ಲ. ಸಾಲು ಮರಗಳು ಇಲ್ಲ, ಕಾಡುಗಳು ಮೊದಲೇ ಇಲ್ಲ. ದಿನೇ ದಿನೇ ಕಡಿಮೆಯಾಗುತ್ತಾ ಇದೆ. ಹೊಂಗೆ ಮರದ ಸೊಪ್ಪು ಕೂಡ ಇಲ್ಲ. ಎಲ್ಲಾದರೂ ಹೊಂಗೆ ಸೊಪ್ಪನ್ನು ನೋಡಬೇಕಾದರೆ, ಬೊಟೇನಿಕಲ್ ಗಾರ್ಡನಿಗೆ ಹೋಗಿ ನೋಡಬೇಕಾಗುತ್ತದೆ. ಇವೆಲ್ಲಾ ಕಾರಣಗಳಿಂದ ಗ್ರೀನ್ ಮೇನ್ಯೂರು ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆಯಾಗುತ್ತಾ ಇದೆ. ಅದಲ್ಲದೆ, ಈ ಪ್ಲಾಂಟೇಶನ್, ದರ್ಕಾಸ್ತು ಎಂದು ಎಲ್ಲಾ ಸೊಪ್ಪನ್ನು ಸಂಪೂರ್ಣವಾಗಿ ನಾಶಮಾಡುತ್ತಿದ್ದಾರೆ. ಇದರ ಪರಿಣಾಮವೇನಾಗುತ್ತದೆ ಎಂದು ಯಾರೂ ಸಂಶೋಧನೆ ಕೈಕೊಂಡಿಲ್ಲ. ಯಾವಾಗ ಭೂಮಿಯಲ್ಲಿ ಖಾರ ಜಾಸ್ತಿಯಾಗಿ ಉಂಟಾಗುತ್ತದೋ, ಆಗ ಅಲ್ಲಿ ಕಾಯಿಲೆಗಳು ಉಂಟಾಗುತ್ತದೆ. ಇಂದು ನಮ್ಮ ದುರದೃಷ್ಟವೋ, ಸರ್ಕಾರದ ದುರದೃಷ್ಟವೋ ಮಳೆಯು ಮಾಯವಾಗುತ್ತಾ ಇದೆ. ಇಂಥ ಸಂದರ್ಭಗಳಲ್ಲಿ ಕೇವಲ ನೋಟಿಫಿಕೇಶನ್ಸ್ ಹೊರಡಿಸಿಬಿಟ್ಟರೆ, ಅದನ್ನು ಪರಿಹಾರ ಮಾಡಿದ ಹಾಗೆ ಆಗುವುದಿಲ್ಲ. ಇದರಿಂದ ಬೆಳೆ ಹಾನಿಯಾಗುತ್ತದೆ ಅಷ್ಟೆ. ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡು ತಾಲ್ಲೂಕುಗಳಲ್ಲಿ ಜೋಳದ ಬೆಳೆಗೆ ರೋಗ ತಗಲಿದ್ದನ್ನು ಮಾನ್ಯ ವಿಟ್ಟಲದಾಸ ಶೆಟ್ಟರು ಕೂಡ ನೋಡಿ ಬಹಳ ನೊಂದುಕೊಂಡರು. ಅಲ್ಲಿ ಲಕ್ಷಾಂತರ ಎಕರೆಗಳಲ್ಲಿ ಜೋಳದ ಬೆಳೆಯು ಇತ್ತು. ಇಂಥ ಸಂದರ್ಭದಲ್ಲಿ ನನ್ನ ಸಲಹೆ ಏನೆಂದರೆ, ಈ ಮಸೂದೆಯನ್ನು ಪುನ: ಸೆಲೆಕ್ಟ್ ಕಮಿಟಿಗೆ ಕಳಿಸಿ ಅದರಲ್ಲಿ ಈ ಒಂದು ಅಬ್ಲಿಗೇಶನ್ನು ಕೇವಲ ರೈತನ ಮೇಲೆ ಹೊರಿಸುವುದರ ಬದಲು, ಸರ್ಕಾರದವರೇ, ರೋಗ ಕಂಡ ಕೂಡಲೇ, ಕಡ್ಡಾಯವಾಗಿ ಸರ್ಕಾರದವತಿಯಿಂದ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು. ಇಲ್ಲದಿದ್ದರೆ, ಮನುಷ್ಯನಿಗೆ ಅವಶ್ಯವಾಗಿರುವಂತಹ ಆಹಾರಕ್ಕೆ ತುಂಬಾ ಧಕ್ಕೆ ಬರುತ್ತದೆ. ಆದ್ದರಿಂದ ನನ್ನ ಮನವಿ ಏನೆಂದರೆ, ಇದನ್ನು ಸೆಲೆಕ್ಟ್ ಕಮಿಟಿಯಲ್ಲಿ ಯಾರೂ ನೋಡದೆ ಇರುವುದರಿಂದ, ಪುನ: ಸೆಲೆಕ್ಟ್ ಕಮಿಟಿಗೆ ಕಳಿಸಬೇಕು. ಇದರಲ್ಲಿ ಗುರುತರವಾದ ಜವಾಬ್ದಾರಿ ಇದೆ. ಆದ್ದರಿಂದ ಕಮಿಟಿಯವರು ಇದನ್ನು ಪುನಃ ಪರಿಶೀಲನೆ ಮಾಡಲಿ. ಕೇವಲ ರೈತನಿಗೆ ಶಿಕ್ಷೆ ಆಗುತ್ತದೆ ಎಂದು ಒಂದು ಅಪೀಲು ಕೊಡೋಣ, ಒಂದು ನೋಟೀಸ್ ಕೊಡೋಣ ಎಂದು ಸಣ್ಣಪುಟ್ಟ ದೃಷ್ಟಿಯಿಂದ ಒಂದು ಮಾರ್ಪಾಟು ಮಾಡಿದ್ದಾರೆಯೇ ಹೊರತು ಇದರಲ್ಲಿ ಸ್ಥೂಲವಾಗಿ ಯಾವ ಉದ್ದೇಶದಿಂದಲೂ ಬೆಳೆಯನ್ನು ಕಾಪಾಡಬೇಕು ಎನ್ನುವ ಒಂದು ದೃಷ್ಟಿಯಿಂದ ಮಾಡಲಿಲ್ಲ ಮತ್ತು ಆ ಉದ್ದೇಶವನ್ನು ಇದು ಈಡೇರಿಸುವುದಿಲ್ಲ. ಆದ್ದರಿಂದ ಪುನಃ ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗಲಿ. ಇದನ್ನು ಅಲ್ಲಿ ಅಮೂಲಾಗ್ರವಾಗಿ ಪರಿಶೀಲಿಸಬೇಕು. ಯಾವುದಾದರೂ ಒಂದು ಬೆಳೆಗೆ ರೋಗ ಬಂದರೆ ರೈತನಾದವನು ಅದನ್ನು ಸಂರಕ್ಷಣೆ ಮಾಡಲಿ, ಮಾಡದೇ ಹೋಗಲಿ, ಮುಖ್ಯವಾಗಿ ಸರ್ಕಾರದವರು ಅದು ಅವರ ಜವಾಬ್ದಾರಿಯೆಂದು ತಿಳಿದು ಸರ್ಕಾರದ ಖರ್ಚಿನಿಂದಲೇ ಬೆಳೆಗಳಿಗೆ ಬಂದಂಥ ರೋಗವನ್ನು ಹೋಗಲಾಡಿಸುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇದನ್ನು ಅಮೂಲಾಗ್ರವಾಗಿ ಪುನಃ ಪರಿಶೀಲಿಸಿ ಸರ್ಕಾರದವರು ರೈತರ ಹಿತರಕ್ಷಣೆ ಮಾಡುತ್ತಾರೆಂದು ನಂಬಿ ಈ ವರದಿಯನ್ನು ವಿರೋಧಿಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ (ಸಾಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯು ಮುಂದೆ ಇರತಕ್ಕಂಥ ಮಸೂದೆಯಲ್ಲಿನ ಪರಿಣಾಮಗಳನ್ನು ಸಾಕಷ್ಟು ಯೋಚನೆ ಮಾಡಬೇಕೆಂಬ ಉದ್ದೇಶದಿಂದ ಹಿಂದೆ ಸೆಲೆಕ್ಟ್ ಕಮಿಟಿಗೆ ರೆಫರ್ ಆಗಿತ್ತು. ಆದರೆ ಆ ಕಮಿಟಿಯ ಸದಸ್ಯರು ಸೆಲೆಕ್ಟ್ ಕಮಿಟಿಯಲ್ಲಿ ಸಾಕಷ್ಟು ಇದರ ಬಗ್ಗೆ ಆಲೋಚನೆ ಮಾಡಲಿಲ್ಲವೆಂದು ಹೇಳುವುದು ನನ್ನ ಉದ್ದೇಶವಲ್ಲ. ಆದರೂ ಸಹ ನನ್ನ ಹಿಂದೆ ಮಾತನಾಡಿದಂಥ ವಿರೋಧ ಪಕ್ಷದ ಹಿರಿಯರು ಹಾಗೂ ಮಿತ್ರರು ಕೆಲವು ಶಂಕೆಗಳನ್ನು ವ್ಯಕ್ತಪಡಿಸಿದರು. ಅದರಲ್ಲಿ ಸಾಕಷ್ಟು ಫೋರ್ಸ್ ಇದೆಯೆಂದು ನಾನು ವಿನಂತಿಸಿಕೊಳ್ಳಲಿಕ್ಕೆ ಬಯಸುತ್ತೇನೆ.

ಮೊಟ್ಟಮೊದಲನೆಯದಾಗಿ ಸೆಕ್ಷನ್ 4 (2)ರಲ್ಲಿ ಈ ರೀತಿಯಾಗಿ ಹೇಳಿದೆ:

> "Call upon any male p rson, not being below the age of eighteen years and residing within the said area, to render such assistance as may be specified"

ಕಾನ್‌ಸ್ಟಿಟ್ಯೂಷನ್ ಪ್ರಕಾರವೂ ಕೂಡ ಕಂಪಲ್ಸರಿಯಾಗಿ ಅಂತಹವರ ಸರ್ವಿಸ್ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆಯೆಂದು ಇದ್ದರೂ ಅದನ್ನು ಮಾಡಬೇಕು ಎಂಬುದಾಗಿ ಹೇಳುವ ಧಾಟಿ ಅಷ್ಟು ಸರಿಯಾದುದಲ್ಲ. ಈ ಮಸೂದೆಯನ್ನು ತರುವುದಕ್ಕೆ ಹಿಂದೆ ಇದ್ದಂಥ ಉದ್ದೇಶವನ್ನು ನಾನು ಪ್ರಶ್ನೆಮಾಡುತ್ತಾ ಇಲ್ಲ. ಸರ್ಕಾರಕ್ಕೆ ಏನಾದರೂ ಒಂದು ಪವರ್ ಅಥವಾ ಅಧಿಕಾರ ಕೆಲವು ಜಟಿಲವಾದ ಸಂದರ್ಭಗಳಲ್ಲಿ ಬೇಕಾಗುತ್ತದೆ. ಆದ್ದರಿಂದ ಇದನ್ನು ಅಲ್ಲಗಳೆಯುವ ಉದ್ದೇಶ ನನಗಿಲ್ಲ. ಈ ಒಂದು ಅಧಿಕಾರವನ್ನು ಕಾನೂನಿನಲ್ಲಿ ಸರಿಯಾಗಿ ಸೂಚಿಸಬೇಕೆಂದು ಹೇಳುತ್ತೇನೆ. ಸರ್ಕಾರದ ಪ್ರತಿನಿಧಿಗಳು ಯಾರು ಅದನ್ನು ಚಲಾಯಿಸುತ್ತಾರೆ, ಎಲ್ಲಿ ಚಲಾಯಿಸುತ್ತಾರೆಂಬ ಬಗ್ಗೆ ಸ್ಪಷ್ಟವಾದ ಕಲ್ಪನೆ ಅವಶ್ಯಕ. ಮತ್ತು ಇದನ್ನು ಯಾರ ಮೇಲೆ ಚಲಾಯಿಸುತ್ತಾರೆಂಬುದನ್ನು ಈ ಸಂದರ್ಭದಲ್ಲಿ ನೋಡುವುದೂ ಕೂಡ ಅಷ್ಟೇ ಪ್ರಾಮುಖ್ಯವಾದ ವಿಚಾರ. ಯಾವುದೇ ರೀತಿಯ ಅನ್ಯಾಯವನ್ನು ಸರಿಯಾಗಿ ಪ್ರತಿಭಟಿಸುವ ಶಕ್ತಿ ಇಲ್ಲದ ಅಸಂಖ್ಯಾತ ಜನಗಳ ಮೇಲೆ ಆ ಅಧಿಕಾರ ಚಲಾವಣೆಯಾಗುತ್ತದೆಂದು ನಾವು ಕಲ್ಪಿಸಿಕೊಳ್ಳಬೇಕಾಗುತ್ತದೆ. ಕೇವಲ ಕಾನೂನಿನ ಉದ್ದೇಶ್ಯ ಮಾತ್ರ ಮುಖ್ಯವಲ್ಲ. ಯಾವ ಒಂದು ಉದ್ದೇಶದಿಂದ ಕಾನೂನು ಮಾಡುತ್ತೇವೋ ಆ ಉದ್ದೇಶ ಎಷ್ಟರಮಟ್ಟಿಗೆ ನಿಜವಾಗಿ ಈಡೇರುತ್ತದೆಯೆಂಬುದನ್ನು ನಾವು ಯೋಚನೆಮಾಡಬೇಕು. ಅಂತಹ ಭರವಸೆಯಿಂದ ನೋಡಿದರೆ ಈ ಮಸೂದೆಯನ್ನು ಇನ್ನೂ ಹೆಚ್ಚಿಗೆ ಪರಿಶೀಲನೆಮಾಡುವ ಅವಶ್ಯಕತೆ ಇದೆಯೆಂದು ನನಗನ್ನಿಸುತ್ತದೆ. ಈ ಮಸೂದೆಗೆ ಸಂಬಂಧಪಟ್ಟ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ ತಪ್ಪಿಗಾಗಿ ರೈತನನ್ನು ಶಿಕ್ಷಿಸುವ ಅಧಿಕಾರ ಇದರಲ್ಲಿ ಕೂಂಚ ಮಟ್ಟಿಗೆ ಇದ್ದರೂ, ಇದರ ಅವಶ್ಯಕತೆ ಎಷ್ಟು ಪ್ರಮಾಣದಲ್ಲಿದೆ, ಎಷ್ಟು ಪ್ರಮಾಣದಲ್ಲಿ ಈ ರೀತಿಯಾದಂಥ ಕಾನೂನು ಮಾಡಬಹುದು ಎಂಬುದನ್ನು ವಿಚಾರಮಾಡಬೇಕು. ಇದರ ಹಿಂದೆ ಇರತಕ್ಕ ಕೆಲವು ಧಾಟಿ ಬಹಳ ಅಸಮರ್ಪಕವಾಗಿದೆ. ರೈತನ ದೃಷ್ಟಿಯಿಂದ ಇದು ಇನ್‌ಸಲ್ಟಿಂಗ್ ಆಗಿದೆಯೆಂದು ಹೇಳಿದರೆ ತಪ್ಪಾಗುವುದಿಲ್ಲ.

ಇನ್ನೊಂದು ವಿಷಯ. ಸೆಕ್ಷನ್ 7 ಮತ್ತು 9. ಈ ಎರಡರಲ್ಲಿಯೂ ರೈತನನ್ನು ಪೇನಲೈಜ್ ಮಾಡಬೇಕೆಂದು ಸೆಲೆಕ್ಟ್ ಕಮಿಟಿಯಲ್ಲಿ ಮಾಡಿದ್ದಾರೆ. ಇದನ್ನು ಅನುಸರಿಸಿ ರೈತ ಕೆಲಸ ಮಾಡದೆ ಇದ್ದರೆ ಆಗ ರೈತನು ಶಿಕ್ಷೆಗೆ ಗುರಿಯಾಗುತ್ತಾನೆ ಈ ಕ್ಲಾಜಿನಲ್ಲಿ ಈ ರೀತಿ ಹೇಳಿದೆ:

> "Where the preventive or remedial measures directed to be carried out by a notification under section 3 include the removal or destruction of any plant in order to eradicate or preve t the introduction or reappearnce of any * * * pest or plant diseases, any occupier who fails to remove or destroy such plant on or before the date specified in such notification shall be deemed to have committed an offence under this Act."

ಇನ್ನು ರೈತನ ಬಗ್ಗೆ ಹೇಳಬೇಕಾದರೆ, he shall do it in accordance with the direction. It is all right. I agree.

ಆದರೆ ರೈತನು ಆ ರೀತಿ ಮಾಡದೇ ಹೋದ ಪಕ್ಷದಲ್ಲಿ ಅವನ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ ಇನ್‌ಸ್ಪೆಕ್ಟಿಂಗ್ ಆಫೀಸರ್ಸ್ ಮತ್ತು ಇತರ ಅಧಿಕಾರಿಗಳಿಗೆ ಆ ರೀತಿ

ಮಾಡಬೇಕೆಂದು ಆಬ್ಲಿಗೇಷನ್ ಇಲ್ಲ. ಒಂದು ಕಾಯಿದೆ ಬಂದಿದೆ ಅಂದರೆ ಅದಕ್ಕೆ ತಕ್ಕ ಕ್ರಮವನ್ನು ಅನುಸರಿಸುವುದಕ್ಕೆ ರೈತ ತಯಾರು ಇಲ್ಲ. ಅವನಿಗೆ ನೋಟೀಸ್ ಕೊಟ್ಟರೂ ಅದರ ಪ್ರಕಾರ ನಡೆಯುತ್ತಾ ಇಲ್ಲ ಎನ್ನುವ ಸಂದರ್ಭದಲ್ಲಿ ಅವನ ಮೇಲೆ 'ಷಲ್'' ಎಂಬ ಪದ ಪ್ರಯೋಗವಾಗಿದೆ. ಅದನ್ನು ಮಾಡದಿದ್ದರೆ ಬೇರೆ ಕ್ರಮಗಳನ್ನು ಅಂದರೆ, ಫೈನ್ ಎಲ್ಲವನ್ನೂ ಕಾನೂನು ಪ್ರಕಾರ ಅವನಮೇಲೆ ವಿಧಿಸಬಹುದಾಗಿದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳ ವಿಚಾರದಲ್ಲಿ ಮಾತ್ರ ''ಮೆ'' ಎಂಬುವಾಗಿ ಪದಗಳನ್ನು ಪ್ರಯೋಗ ಮಾಡುತ್ತಾರೆ. ರೈತನ ಬಗ್ಗೆ ಅವನ ಸ್ಥಿತಿಗತಿಗಳನ್ನು ವಿಚಾರಮಾಡದೆ ಅವನೂ ಮತ್ತು ಅವನ ಸುತ್ತಮುತ್ತ ಜನಗಳು ಅಸಿಸ್ಟ್ ಮಾಡಬೇಕೆಂಬ ಕ್ಲಾಜು ಇಲ್ಲದೆ ಅವನ ಮೇಲೆ ವಿವಿಧ ಶಿಕ್ಷೆಗಳನ್ನು ವಿಧಿಸುವಂಥ ಕಾನೂನು ಇದೆ. ಆದ್ದರಿಂದ ಯಾವುದೇ ಕಾನೂನು ಮಾಡಿದರೂ ಆ ಕಾನೂನನ್ನು ಜಾರಿಮಾಡುವುದು ಆಡಳಿತ ಯಂತ್ರಕ್ಕೆ ಸಂಬಂಧಪಟ್ಟ ವಿಚಾರ. ಆದ್ದರಿಂದ ಸಾಕಷ್ಟು ಅಧಿಕಾರ ಆಡಳಿತ ಯಂತ್ರಕ್ಕೆ ಇರಬೇಕಾಗುತ್ತದೆ. ಯಾವಾಗ ಕಾನೂನು ಮಾಡಿದರೂ ಅದರಲ್ಲಿ ಎಷ್ಟು ಬಂದೋಬಸ್ತು ಬೇಕೋ ಅಷ್ಟನ್ನು ಇಡಬೇಕು. ಅದು ನಮ್ಮ ಕರ್ತವ್ಯ. ಹಿಂದೆ 2-3 ವಿಧಿಗಳಲ್ಲಿ ಇರಬಹುದಾದಂಥಾದ್ದರಲ್ಲಿ ಅಷ್ಟೇನೂ ಆಕ್ಷೇಪಣೆಗೆ ಅರ್ಹವಲ್ಲ. ಇನ್ನು ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಆಗಿ ರೈತರಿಂದ ರಿಕವರ್ ಮಾಡುತ್ತಾರೆಂಬ ಬಗ್ಗೆ ಬೇರೆ ಒಂದು ಪೀನಲ್ ಕ್ಲಾಜ್ ಇದೆ:

"Whenever a particular person fails to carry out the directions of an Officer, the officer shall carry out the measures and recover the cost as arrears of land revenue.

ಇದು ಒಂದೇ ವಿಧಿ ಸಾಕು. ಕಾನೂನಿನ ಉದ್ದೇಶವನ್ನು ಸಾರ್ಥಕಪಡಿಸಲಿಕ್ಕೆ. ಬೇರೆ ವಿಧಿಗಳು ಏನೂ ಬೇಡ. ಆದ್ದರಿಂದ ಈ ಮಸೂದೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಪರಿಶೀಲಿಸ ಬೇಕು. ಈ ಒಂದು ಚರ್ಚೆಯ ಹಿನ್ನೆಲೆಯಲ್ಲಿ ಅವಶ್ಯಕವಾದಂಥ ಮಾಡಿಫಿಕೇಷನ್ಸ್ ಮಾಡ ಬೇಕೆಂಬುದಾಗಿ ನಾನು ಸಚಿವರಲ್ಲಿ ಭಿನ್ನೈಸಿ ನನ್ನ ಮಾತನ್ನು ಮುಗಿಸುತ್ತೇನೆ.

†**Sri S. S. SHETTAR.**—Mr. Deputy Speaker Sir, there are strong reasons to recommend that this Bill may once again be referred to the Select Committee. There is certainly a contradiction in the policy of the Government. Now-a-days it is the policy of the Government to nationalise such of the industries wherein huge profit could be apprehended. But here, in this context, when agriculture is considered to be a great industry of the country and the country is facing the food problem and agricultural industry is facing pest and disease, it is the responsibility of the Government to see that this pest and disease is properly controlled. In the circumstances, if the Government does not come forward to take up the responsibility and share the responsibility to control the pests and diseases to the agricultural crop, I must say that the Government has failed in its duty.

5-30 P.M.

Then, I must say that the Government is failing in its duty. Sir, there are certain things which an individual cannot be expected to do, and he cannot be expected to discharge duties towards such obligations which are considered to be more or less the responsibility of the society as a whole. Here, supposing, Government apprehends that certain area is affected, it is more or less a preventive remedy. Actually, the disease is not there but only a preventive measure has to be undertaken. In such matters, it is the look out of the experts to know how much will have to be spent to control the disease. It will not be within the capacity of any individual or association. It is only the Government

(SRI S. S. SHETTAR)

who should come forward to check this pest and disease. So, Sir, in view of the recent trend, I must say that Government should come out and openly help the agriculturists.

Sir, the way in which the Bill has been worded and the Policy of this Bill shows that Government have no belief in the agricultural class as a whole. Many Hon'ble members have said that section 10—recovery of the cost will work great hardship to agriculturists who are not in a position to purchase manure and undertake this kind of work in the way it is expected of him. How far he could share the responsibility of the cost is not made clear in this section. There should be a limit for an individual so that he can discharge his duty within that limit properly. Suppose, a poor man having a small bit of land is asked to work and spend huge amount over this issue; would it be advisable to recover this huge amount from him? No doubt there is a provision for appeal. But, the limitation of an individual should be properly defined.

The intention of Government in legislating this Bill is also not clear. May I know whether the Government is not in a position to secure the co-operation of the agriculturists? It is my personal experience and I have seen in so many places agriculturists complaining against the officers that amenities are not given in time, that certain things are not properly advised and so on. They complain that at the proper time proper advise is not given and therefore they have lost crops on several occasions. Suppose, they apprehend pest and disease; a notification is necessary notifying this. When that notification is not forthcoming in proper time and the people are eager and when they approach the concerned officers, certain responsibility fall on the Government. What would be the remedy? Our intention is to control the pest and disease. It is not one way traffic. Merely to call upon the agriculturists to control the disease is not enough. It is also the responsibility of the Government to share in this. But the policy of the Government is, they are shifting the burden on the agriculturists who are not capable of taking part in this. I therefore appeal that this Bill may again be referred to the Select Committee.

ಶ್ರೀ ಜಿ. ಎಂ. ಮಂಜುನಾಥಯ್ಯ (ಸೋಮವಾರಪೇಟೆ).—ಸ್ವಾಮಿ, ಅಧ್ಯಕ್ಷರೇ, ಈ ಮೈಸೂರು ರಾಜ್ಯದ ವ್ಯವಸಾಯ ಕೀಟ ಹಾಗೂ ರೋಗಗಳಿಗೆ ಸಂಬಂಧಿಸಿದ ವಿಧೇಯಕವನ್ನು ಬಹಳ ಆತುರ ಆತುರವಾಗಿ ತಯಾರು ಮಾಡಿದ್ದಾರೆ. ಈ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿದ್ದರೂ ಕೂಡ ಅಲ್ಲಿ ಇದಕ್ಕೆ ಎಷ್ಟು ವಿಚಾರ ವಿನಿಮಯ ವಿನಿಯೋಗವಾಗಬೇಕಿತ್ತೊ ಅಷ್ಟು ಆಗಿಲ್ಲ ಎಂದು ನನ್ನ ಮನಸ್ಸಿಗೆ ಭಾಸವಾಗುತ್ತದೆ. ನಾನು ಕೆಲವು ಉದಾಹರಣೆಗಳನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಪೆಸ್ ಕಂಟ್ರೋಲ್ ವಿಚಾರ ಯಾವ ಯಾವ ಪೆಸ್ಟ್‌ಗಳು ವ್ಯವಸಾಯವನ್ನು ನಾಶಿಸುತ್ತವೆ, ಇದರಲ್ಲಿ ಯಾವ ಯಾವ ಪೆಸ್ಟಿಗೆ (ರೋಗಕ್ಕೆ ಯಾವುದು ಮನುಷ್ಯನಿಗೆ ಅಪಾಯವಿಲ್ಲದ ರೆಮಿಡಿ (ನಿವಾರಣೆ) ಎಂಬುದು ತೀರ್ಮಾನ ಮಾಡದೇ ಈ ಕಾನೂನು ತರಬಾರದು. ಈಗ ಉದಾಹರಣೆಗೆ ಹೇಳುವುದಾದರೆ ಈ ಕಾನೂನು ಅನುಸರಿಸಿ ಒಬ್ಬ ಅಧಿಕಾರಿ ಅಗ್ರಿಕಲ್ಚರಲ್ ಪೆಸ್ಟಿಗೆ ಸಂಬಂಧಪಟ್ಟಹಾಗೆ ಯಾವುದೋ ಒಂದು ಡಿ. ಡಿ. ಟಿ ಜಾತಿಗೆ ಸೇರಿದ ಪ್ರಯೋಗವನ್ನು ಮಾಡಬೇಕು ಎಂದು ರೈತನಿಗೆ ಹೇಳುತ್ತಾನೆ.

ಆದರೆ ಆ ಪ್ರಯೋಗ ತಪ್ಪು. ಇರಬಹುದು. ಆ ತಪ್ಪು ಪ್ರಯೋಗದಿಂದ ರೈತನಿಗೆ ಕಷ್ಟ ನಷ್ಟ ಆದರೆ ಅದಕ್ಕೆ ಯಾರೂ ಜವಬ್ದಾರರಲ್ಲ ಅಧಿಕಾರಿ ಮಾತ್ರ ಇಂಥಾ ಪ್ರಯೋಗ ಮಾಡಬೇಕೆಂದು ತಪ್ಪು ಸಲಹೆ ಮಾಡಿದರೂ ಕೂಡ ಅದನ್ನು ಈಗ ಪಾಸಾಗುವ ಪೆಸ್ಟ್ ಕಂಟ್ರೋಲ್ ಕಾನೂನು ಪ್ರಕಾರ ರೈತ ಮಾಡಿಯೇ ತೀರಬೇಕಾಗತ್ತಿದೆ. ಈ ಕಾನೂನನ್ನೂ ಇಲ್ಲಿ ಪಾಸು ಮಾಡಿ ಇದನ್ನು ಜಾರಿಗೆ ತರಬೇಕಾದರೆ ಪ್ರತಿಯೊಬ್ಬ ಶಾಸಕರೂ ಕೂಡ "ಸೈಲೆಂಟ್ ಸ್ಪ್ರಿಂಗ್" ಎನ್ನತಕ್ಕ ಪುಸ್ತಕವನ್ನು ಓದಿ ಅನಂತರ ಈ ಕಾನೂನನ್ನು ಜಾರಿಗೆ ತರಬೇಕೆಂದು ನಾನು ಸೂಚನೆ ಮಾಡುತ್ತೇನೆ. ಗ್ಯಾಮಕ್ಸೇನ್, ಡಿ. ಡಿ. ಟಿ. ಗಳಂಥ ಮದ್ದುಗಳನ್ನು ಹೊಲಗಳಲ್ಲಿ ಪ್ರಯೋಗ ಮಾಡುವುದರಿಂದ ಅಲ್ಲಿ ಬೆಳೆಯುವ ಪದಾರ್ಥಗಳಿಗೆ ಎಫೆಕ್ಟ್ ಆಗುವುದಲ್ಲದೆ ಆ ಡಿ.ಡಿ.ಟಿ. ಯು ಮಣ್ಣಿಗೆ ಸೇರಿ ಜಲದಮೂಲಕ ಸ್ಪ್ರಿಂಗ್ಸ್ ಹೊಳೆಗೆ ಸೇರಿ ಹೊಳೆಯಿಂದ ಸಮುದ್ರಕ್ಕೆ ಸೇರಿ ಸಮುದ್ರದಲ್ಲಿರುವ ಮೀನುಗಳಿಗೆ ಅದರ ವಿಷ ಪ್ರಯೋಗವಾಗಿರುವ ವಿಷಯ ಮತ್ತು ಡಿ.ಡಿ.ಟಿ. ಯು ಪ್ರಯೋಗವಾಗಿರುವ ಹುಲ್ಲನ್ನು ದನಗಳು ತಿಂದು ದನಗಳ ದೇಹದಿಂದ ಡಿ.ಡಿ.ಟಿ. ಯ ಅಂಶಗಳು ಹಾಲಿನ ಮೂಲಕ ಹೇಗೆ ಮನುಷ್ಯನ ದೇಹಕ್ಕೆ ಸೇರುತ್ತವೆ ಅನ್ನುವ ವಿಚಾರಗಳು ಸಹಾ ಸೈಲೆಂಟ್ ಸ್ಪ್ರಿಂಗ್ ಎನ್ನುವ ಪುಸ್ತಕದಲ್ಲಿ ಪ್ರಸ್ತಾಪಿಸಿದ್ದಾರೆ. ಆ ಪುಸ್ತಕಗಳನ್ನು ಈ ಅಸೆಂಬ್ಲಿ ಲೈಬ್ರರಿಯಲ್ಲಿ ಇಡಬೇಕೆಂತಲೂ ನಾನು ಸೂಚನೆ ಕೊಡಲು ಬಯಸುತ್ತೇನೆ. ಕೆಲವು ಸಂದರ್ಭಗಳಲ್ಲಿ ಹೊಲಗಳಲ್ಲಿ ಬೆಳೆಗಳಿಗೆ ಹತ್ತತಕ್ಕ ಹುಳುಗಳನ್ನು ಸಾಯಿಸಿಸುವುದಕ್ಕೋಸ್ಕರ ಇಂತಹ ಔಷಧಿಯನ್ನು ಸ್ಪ್ರೇ ಮಾಡಿದಾಗ ಅದರ ವಿಷ ಆಹಾರ ಧಾನ್ಯಗಳಲ್ಲಿ ಸೇರಿ ಅದರ ಪರಿಣಾಮ ಪಟ್ಟಣಗಳಲ್ಲಿ ಆ ಆಹಾರವನ್ನು ಉಪಯೋಗಿಸುವ ಮನುಷ್ಯರಿಗೆ ಉಂಟಾಗುತ್ತದೆ. ಈಗ ಯಾವುದಾದರೂ ಒಂದು ಬೆಳೆಗೆ ಹುಳು ಬಿದ್ದರೆ ಅಥವಾ ರೋಗ ತಗಲಿದರೆ ಅದಕ್ಕೆ ಫಾಲಿಡಾಲ್ ಪ್ರಯೋಗಿಸಿದರೆ ಆ ರೋಗ ಹೋಗುತ್ತದೆ ಎಂದು ಒಬ್ಬ ರೈತ ಫಾಲಿಡಾಲ್ ತಂದು ಬೆಳೆಗೆ ಹೊಡೆಯುತ್ತಾನೆ. ಅದನ್ನು ಪ್ರಯೋಗ ಮಾಡಿದ ಮೇಲೆ ಎಷ್ಟು ದಿವಸ ಬೆಳೆಯನ್ನು ಕಟಾವು ಮಾಡದೇ ಬಿಡಬೇಕು ಎಂಬುದು ರೈತನಿಗೆ ಗೊತ್ತಾಗುವುದಿಲ್ಲ. ಒಂದು ವೇಳೆ ಫಾಲಿಡಾಲ್ ಹೊಡೆದು 2—3 ದಿವಸಗಳಲ್ಲಿ ಬೆಳೆಯನ್ನು ಕಿತ್ತು ಮಾರ್ಕೆಟ್ಟಿಗೆ ಮಾರಾಟಕ್ಕೆ ತಂದರೆ ಅಂಥಾದ್ದನ್ನು ಜನಗಳು ಕೊಂಡುಕೊಂಡು ಉಪಯೋಗಿಸಿದರೆ ಇದರಿಂದ ಫುಡ್ ಪಾಯಿಜನ್ ಆಗಿ ಅನೇಕ ಜನಗಳು ಸಾಯುವ ಸಂದರ್ಭವೂ ಬರಬಹುದು. ಆದಕಾರಣ ಅವುಗಳ ವಿಷಯದಲ್ಲಿ ಯಾವರೀತಿ ಎಚ್ಚರಿಕೆ ರೈತನು ಅನುಸರಿಸಬೇಕು ಎನ್ನತಕ್ಕ ವಿಷಯದಲ್ಲಿ ರೈತನಿಗೆ ಸಾಕಷ್ಟು ತಿಳುವಳಿಕೆಯನ್ನು ಕೊಡಬೇಕಾಗುತ್ತದೆ. ಅಪಾಯಕಾರಿಯಾದ ಡಿ.ಡಿ.ಟಿ. ಗ್ಯಾಮಕ್ಸೇನ್‌ನಂಥ ಮದ್ದನ್ನು ಬೆಳೆಗೆ ಹೊಡೆಯಿರಿ ಎಂದು ರೈತರಿಗೆ ಹೇಳಿದರೂ ಅದರಿಂದ ಅಪಾಯ ಇದೆ ಎಂದು ತಿಳಿದ ಒಬ್ಬ ರೈತನು ಆ ಮದ್ದನ್ನು ಉಪಯೋಗಿಸದಿದ್ದರೆ ಈ ಕಾನೂನಿನ ಪ್ರಕಾರ ಅವನನ್ನು ಶಿಕ್ಷಿಸಬಹುದಾದರೆ ಅದು ಯಾವ ನ್ಯಾಯ? ಈ ವಿಚಾರಗಳನ್ನು ಇನ್ನೂ ಕೂಲಂಕೂಷವಾಗಿ ಪರಿಶೀಲನೆ ಮಾಡಲು ಸಾಕಷ್ಟು ಕಾಲಾವಕಾಶವನ್ನು ಕೊಡಬೇಕು. ಇದರ ಬಗ್ಗೆ ಸಾಕಷ್ಟು ತಜ್ಞರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಅದ್ದರಿಂದ ಪುನಃ ಈ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಮತ್ತೆ ಕೂಲಂಕಷವಾಗಿ ಪರ್ಯಾಲೋಚನೆ ಮಾಡಬೇಕು. ಈ ಕಾನೂನಿನಿಂದ ದೇಶಕ್ಕೆ ರೈತರಿಗೆ ಅಪಾಯ ಇದೆಯೆಂದು ನಾನು ಮತ್ತೊಮ್ಮೆ ಹೇಳಬಯಸುತ್ತೇನೆ. ಅಮೆರಿಕಾ ಮುಂತಾದ ಕಡೆಗಳಲ್ಲಿ ಹೊಲಗಳಿಗೆ ಔಷಧಿಯನ್ನು ಸ್ಪ್ರೇ ಮಾಡಿದರೆ ಆ ಸ್ಥಳದ ಒಳಗಡೆ ಇಷ್ಟು ದಿವಸಗಳು ಪ್ರವೇಶ ಮಾಡಕೂಡದೆಂದು ಅಲ್ಲಿ ಒಂದು ಬೋರ್ಡ್ ಹಾಕುತ್ತಾರೆ. ಕೆಲವು ಪ್ರಯೋಗಗಳನ್ನು ಮಾಡಬೇಕಾದರೆ ಅದಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಕಾನೂನುಗಳನ್ನು ಅಪಾಯ ತಪ್ಪಿಸುವುದಕ್ಕೋಸ್ಕರ ಮಾಡಿದ್ದಾರೆ. ನಮ್ಮ ದೇಶದಲ್ಲಿ ಆ ರೀತಿ ಕಾನೂನು ಮಾಡದೆ ಇಂಥಾ ಕಾನೂನನ್ನು ಜಾರಿ ಮಾಡಿ ರೈತರಿಗೆ ಶಿಕ್ಷೆ ವಿಧಿಸುವುದು ಯಾವರೀತಿಯಲ್ಲಿಯೂ ಸರಿಯಲ್ಲ. ಇದು ಅಪಾಯ ಗರ್ಭಿತವಾದ ಕಾನೂನು. ಕೆಲವು ಮದ್ದುಗಳ ಪ್ರಯೋಗದ ಪರಿಣಾಮವೇನು ಎಂಬುದು ಗೊತ್ತಿಲ್ಲದೆ ರೈತರು ಈ ಪ್ರಯೋಗಗಳನ್ನು ಮಾಡಿ ಸಾವಿರಾರು ಜನಗಳು ಅಕಸ್ಮಾತಾಗಿ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಸರಿಯಾದ ಕ್ರಮಗಳನ್ನು ಅರಿಯದೆ ಈ ಅಪಾಯಕಾರಿ ಮದ್ದುಗಳನ್ನು ಸ್ಪ್ರೇ ಮಾಡುವುದರಿಂದ ಆ ವಿಷ ಆಹಾರದಲ್ಲಿ ಸೇರುತ್ತದೆ ಅಂತಹ ಆಹಾರಗಳನ್ನು ಜನಗಳು ಸೇವಿಸಿ ಸಾವಿಗೆ ತುತ್ತಾಗುತ್ತಾರೆ. ಆದ್ದರಿಂದ ದಯವಿಟ್ಟು ಈ ವಿಧೇಯಕವನ್ನು ಪುನಃ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಇದನ್ನು ಪುನಃ ಪರಿಶೀಲನೆ ಮಾಡಬೇಕೆಂದು ಪುನಃ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈ ಬಿಲ್ಲು ಹಿಂದೆ ಅಸೆಂಬ್ಲಿ ಮುಂದೆ ಬಂದಾಗ ಸಾಕಷ್ಟು ಚರ್ಚೆಗೆ ಅವಕಾಶ ಸಿಕ್ಕದೆ ಸೆಲೆಕ್ಟ್ ಕಮಿಟಿಗೆ ಹೋಯಿತು. ಸೆಲೆಕ್ಟ್ ಕಮಿಟಿಯಲ್ಲಿ ಈ ಬಿಲ್ಲಿನ ಮೇಲೆ ಸಾಕಷ್ಟು ಚರ್ಚೆಯಾಗಿ ಇಲ್ಲಿಗೆ ಬಂದಿದೆ ಎಂದು ನಾನು ತಿಳಿದು

(ಶ್ರೀ ಕೆ. ಎನ್. ವೀರಪ್ಪಗೌಡ)

ಕೊಂಡಿದ್ದೇನೆ. ಆದರೆ ಇದರಲ್ಲಿರುವ ಎರಡು ಶಬ್ದಗಳು ಎಂದರೆ 'ಪನಿಶ್‌ಮೆಂಟ್' ಹಾಗೂ 'ಫೈನ್' ಎನ್ನುವ ಪದ ಸರಿಯಾಗಿಲ್ಲ ಎಂದು ನನ್ನ ಭಾವನೆ. ವ್ಯವಸಾಯಗಾರ ಸೋಮಾರಿ ಎಂಬ ಭಾವನೆ ಇದರಿಂದ ಆಗುತ್ತದೆ ಎಂದು ಹೇಳಲು ಇಷ್ಟಪಡುತ್ತೇನೆ. ಈ ರೀತಿಯಾಗಿ ಈ ಬಿಲ್ಲು ಸೆಲೆಕ್ಟ್ ಕಮಿಟಿಗೆ ಹೋದ ಮೇಲೆ ಹೀಗೆ ಬರುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ಸೆಲೆಕ್ಟ್ ಕಮಿಟಿಯವರು ಇದರ ಮೇಲೆ ದೀರ್ಘವಾಗಿ ಚರ್ಚೆ ಮಾಡಿ ಇಂತಹ ಅನುಮಾನಗಳಿಗೆ ಅವಕಾಶವಿಲ್ಲದಂತೆ ಮಾಡುತ್ತಾರೆಂದು ನಾನು ತಿಳಿದಿದ್ದೆ. ಆದರೆ ವ್ಯವಸಾಯಗಾರರ ಹಿತದೃಷ್ಟಿಯಿಂದ ಹಾಗೂ ಈಗ ಹೆಚ್ಚು ಆಹಾರ ಉತ್ಪತ್ತಿ ಮಾಡಬೇಕು ಇದಕ್ಕಾಗಿ ರೈತರಿಗೆ ಎಲ್ಲ ವಿಧವಾದ ಸಹಾಯ ಸಹಕಾರಗಳನ್ನು ಕೊಡಬೇಕೆಂದು ಎಲ್ಲ ಕಡೆಗಳಲ್ಲಿಯೂ ಸರಕಾರ ಸಹಾಯ ಮಾಡುತ್ತಿದೆ. ಆದರೆ ಇಲ್ಲಿ ವ್ಯವಸಾಯಗಾರನ ಹಿತದ ಬಗ್ಗೆ ಅವನಿಗೆ ಒಳ್ಳೆಯ ಬೀಜಗಳನ್ನು ಕೊಡುವುದು. ಬೆಳೆಗಳಿಗೆ ಏನಾದರೂ ರೋಗ ರುಜಿನಗಳು ತಲೆದೋರಿದರೆ ಅದರ ನಿವಾರಣೆಗೆ ಸಹಾಯ ಮಾಡುವುದು, ಸುಲಭ ಬೆಲೆಯಲ್ಲಿ ಗೊಬ್ಬರ ಇತ್ಯಾದಿಗಳನ್ನು ಒದಗಿಸುವುದು ಮತ್ತು ಹೊಸ ಹೊಸದಾದ ಪ್ರಯೋಗಗಳನ್ನು ಅನುಸರಿಸಲು ಸಾಕಷ್ಟು ಮಾಹಿತಿ ಕೊಟ್ಟು ಅವರಿಗೆ ಹೆಚ್ಚು ಬೆಳೆ ಬೆಳೆಯಲು ಸಹಾಯ ಮಾಡುವುದು ಇತ್ಯಾದಿ ಸಹಾಯಗಳನ್ನು ಸರಕಾರ ಈಗ ರೈತರಿಗೆ ಒದಗಿಸುತ್ತಿದೆ. ಆದರೆ ಇದರಲ್ಲಿರುವ ರೂಪರೇಕೆಗಳನ್ನು ನೋಡಿದರೆ ರೈತರು ಬೆಳೆಯುವ ಬೆಳೆಗಳಿಗೆ ಒಳ್ಳೆಯ ಬೆಲೆ ಇದ್ದರೂ ರೈತರು ಉತ್ಸಾಹದಿಂದ ವ್ಯವಸಾಯ ಮಾಡುತ್ತಿಲ್ಲವೆಂಬ ಅರ್ಥ ಉಂಟಾಗುತ್ತದೆ. ವ್ಯವಸಾಯ ಮಾಡುವ ರೈತಾಪಿ ಜನಕ್ಕೆ ಇದರಿಂದ ತೊಂದರೆಯಾಗುತ್ತದೆ. ಅವರಿಗೆ ಸಹಾಯ ಮಾಡುವುದಕ್ಕೆ ಹೋಗಿ ಇದರಿಂದ ತೊಂದರೆಯಾಗುತ್ತದೆ. ಇದನ್ನು ಸರಕಾರ ಪುನರ್ವಿಮರ್ಶೆ ಮಾಡುವುದು ಅಗತ್ಯ. ಯಾವುದೇ ಕಾನೂನಾದರೂ ಅದರಲ್ಲಿ ಏನಾದರೂ ದೋಷಗಳು ಕಂಡು ಬಂದರೆ ಅದನ್ನು ಪುನರ್ವಿಮರ್ಶೆ ಮಾಡುವುದು ಕಷ್ಟಸಾಧ್ಯವಾದರೂ ಸ್ವಲ್ಪ ಮಟ್ಟಿಗಾದರೂ ಜನಕ್ಕೆ ಅನುಕೂಲವಾಗುವಂತೆ ಮಾಡಬೇಕು. ಆದುದರಿಂದ ನಾನು ಸರಕಾರಕ್ಕೆ ಸೂಚನೆ ಮಾಡುವುದು ಇದರಲ್ಲಿರುವ ಎರಡು ಪದಗಳನ್ನು ಎಂದರೆ 'ಪನಿಶ್‌ಮೆಂಟ್' ಹಾಗೂ 'ಫೈನ್' ಎನ್ನುವುದನ್ನು ಬದಲಾವಣೆ ಮಾಡುವುದು ಒಳ್ಳೆಯದು. ರೈತರಿಗಾಗಿ ಕೋಟಿಗಟ್ಟಲೆ ಖರ್ಚು ಮಾಡುತ್ತಿರುವಾಗ ಇಂತಹ ಅನುಕೂಲಗಳನ್ನು ರೈತರ ಹಿತಕ್ಕಾಗಿ ಮಾಡುವುದು ಅಗತ್ಯವಾಗಿದೆ. ಇಂತಹ ಒಂದು ಸಂದರ್ಭದಲ್ಲಿ ರೈತರಿಗೆ ಸರಿಯಾದ ಸಹಾಯ ಸೌಕರ್ಯಗಳನ್ನು ಮಾಡದೇ ಹೋದರೆ ಮುಂದೆ ಇದನ್ನು ಸರಿಮಾಡಲು ಆಗುವುದಿಲ್ಲ. ಇದರಲ್ಲಿ ಅನುಕೂಲವಾಗುತ್ತದೆ ಎಂದು ಇದ್ದರೂ ಇದು ಇಂಡೈರೆಕ್ಟ್ ಆಗಿ ರೈತರಿಗೆ ತೊಂದರೆ ಮಾಡುತ್ತದೆ. ರೈತನು ರೋಗಕ್ಕೆ ತಕ್ಕ ಕ್ರಮ ಕೈಗೊಳ್ಳದಿದ್ದರೆ ಸರಕಾರದವರೇ ಮಾಡಿಸಿ ಆ ಖರ್ಚನ್ನು ರೈತರಿಂದ ವಸೂಲ ಮಾಡುವಾಗ ಲ್ಯಾಂಡ್ ರೆವಿನ್ಯೂ ಅರಿಯರ್ಸ್‌ನಂತೆ ವಸೂಲು ಮಾಡುವ ಹಾಗೆ ಮಾಡಿದರೆ ಅದೇ ಇಂಡೈರೆಕ್ಟ್ ಆಗಿ ಫೈನ್ ಆದಂತೆ ಆಗುತ್ತದೆ. ಅದೇನು ರೈತರ ಗ್ರಹಚಾರವೋ ಏನೋ ಬಿಲ್ಲು ಇಲ್ಲಿ ಬರುವಾಗ ರೈತರ ಹಿತಕ್ಕೆ ಬರುತ್ತದೆ. ಆದರೆ ಜಾರಿಗೆ ಕೊಡುವಾಗ ಅಧಿಕಾರಿಗಳಿಂದ ತೊಂದರೆ ಅನುಭವಿಸಬೇಕಾಗುತ್ತದೆ, ಈಗ ಮಾದರಿಯಾಗಿ ಹೇಳುತ್ತೇನೆ? ಲೆವಿ ಕಾನೂನಿನಲ್ಲಿ ರೈತರಿಗೆ ಏನು ತೊಂದರೆ ಇದೆ ಎನ್ನುತ್ತೇವೆ. ಆದರೆ ರೈತರು ಪಡುವ ಕಷ್ಟ ಎಲ್ಲರಿಗೂ ಗೊತ್ತಿದೆ. ಇದನ್ನು ಪುನರೀ ಕನ್‌ಸಿಡರು ಮಾಡಲು ಸೆಲೆಕ್ಟ್ ಕಮಿಟಿಗೆ ಪುನಃ ಕಳುಹಿಸಿ ಸರಿಯಾಗಿ ಮಾಡುವುದು ಉತ್ತಮ ಎಂದು ಇಲ್ಲಿ ಒತ್ತಾಯ ಮಾಡುತ್ತೇನೆ. ಒಂದು ವೇಳೆ ಹಾಗಾಗದೇ ಹೋದರೆ ಸರಕಾರದವರೇ ಪುನರ್ವಿಮರ್ಶೆ ಮಾಡಿ ಸರಿಮಾಡುವುದು ಸೂಕ್ತವಾಗಿದೆ. ರೈತರು ಕೆಲವರು ಬುದ್ಧಿವಂತರಾಗಿರಬಹುದು ಎಂದು ಸರಕಾರ ತಿಳಿದಿರಬಹುದು. ನೂರರಲ್ಲಿ ತೊಂಬತ್ತು ಜನ ಕಾನೂನು ತಿಳಿದುಕೊಳ್ಳುವಶಕ್ತಿ ಇಲ್ಲದವರಾಗಿದ್ದಾರೆ ಆದರೆ ಎಷ್ಟೋ ಕಡೆಗಳಲ್ಲಿರುವ ರೈತರಿಗೆ ಸರಕಾರ ಅವರ ಹಿತಕ್ಕಾಗಿ ಏನೇನು ಕಾನೂನುಗಳನ್ನು ಮಾಡಿದ್ದಾರೆ ಎನ್ನುವ ತಿಳುವಳಿಕೆಯೇ ಇಲ್ಲ. ಅದುದರಿಂದ ಇಂತಹ ಕಾನೂನುಗಳನ್ನು ಕಡಿಮೆ ಮಾಡುವುದು ಒಳ್ಳೆಯದು. ಇಂತಹ ಕಾನೂನುಗಳನ್ನು ಮಾಡಿದರೆ ಇದಕ್ಕಾಗಿ ಪ್ರತ್ಯೇಕವಾಗಿ ಅಧಿಕಾರಿಗಳನ್ನು ನೇಮಕ ಮಾಡಬೇಕು ಇದಕ್ಕಾಗಿ ಒಂದು ಆರ್ಗನೈಸೇಷನ್ ಮಾಡಬೇಕು. ಇದರಿಂದ ಸರ್ಕಾರಕ್ಕೆ ಹೆಚ್ಚು ಖರ್ಚು ಆಗುತ್ತದೆ. ಅದನ್ನೇ ರೈತರಿಗೆ ಪರಿಹಾರ ರೂಪದಲ್ಲಿ ಕೊಡಬಹುದು. ಇದರಲ್ಲಿರುವ ಎರಡು ಪದಗಳನ್ನು ಎಂದರೆ "ಫೈನ" ಹಾಗೂ ಪನಿಷ್‌ಮೆಂಟ್' ಎಂದಿರುವುದು ರೈತರಿಗೆ ಅಗೌರವ. ಆದ್ದರಿಂದ ಇದನ್ನು ತೆಗೆಯುವುದು ಸೂಕ್ತ ಎಂದು ಇಲ್ಲಿ ಸಲಹೆ ಮಾಡಲು ಇಷ್ಟ ಪಡುತ್ತೇನೆ.

† Sri DIGAMBARA RAO B. KALMANKAR.—I rise to support this Bill but with some observations. The Bill is no doubt a progressive one but the poor agriculturist is very much fettered and many

responsibilities are cast on him. As I have stated earlier also, some of this expenditure should have been shared by the State Government and local bodies and they should go to the rescue of the poor farmers. As we all know, even though agriculture is given much importance to-day what we find is very few people are in a position to take the benefits of improved seeds improved manures and such other things. The majority of the ryots are not in a position to make use of them. They are poverty-stricken and to expect much from them to safeguard their own plants and their own agriculture is too much. I would suggest that the Taluk Boards and Gram Panchayats and some other agencies which are sharing the major portion of the revenue should have been given some responsibility in this respect. Now there have been some changes made by the Select Committee. Imprisonment has been removed and a fine of Rs. 500 is proposed. I think even this also should have been made nominal because the offence under this Bill is not something like a penal offence. It should have been treated on a separate footing and some minor penalty would have been sufficient.

In clause 4, notification which was required to be issued by the Government is now sought to be issued by the Director. Even here, I think there will be much delay and by that time there will be spread of pests and diseases. As regards the inspecting officers, in the original Bill the status of the officer was silent and now it has been suggested by the Select Committee that the inspecting officer should be of a gazetted rank. That is welcome and he would be in a better position to do the work as per the sense of justice and law.

In the orginal Bill the words insects and pests were used. But pests include insects. So it has been substituted by pests and diseases. This is also properly done.

Then, there is one provision for appeal, that is the prescribed officer. This prescribed officer has to be prescribed by the rules to be framed. I think it would have been better as the inspecting officer is appointed under section 15, appellate authority also should heve been prescribed. Instead of leaving it to be defined under the rules to be framed, it would have been better if the appellate authority was also shown in the Bill itself. In clause 12, village officer is mentioned. That also includes Village Accountant, Panchayat Secretary and the Village Level Workers. This also is an improvement over the original Bill. My submission is that the local bodies should have been vested with some responsibility. That would have solved the problem of poor agriculturists.

With these observations I close my speech.

SRI D. B. PAWAR.—Sir, I have been very closely listening to the speeches of the hon'ble members and I have also thought over the suggestion made by the hon'ble members. There seems to be a general apprehension that this Bill has got some punitive measures and as such this Bill should be again referred back to the Joint Select Committee.

(SRI D. B. PAWAR)

Then, Sir, a doubt was expressed by a few members as to whether any such Act exists anywhere in the world. That was the fear expressed by the hon'ble member Sri Siddaveerappa. For his information I would like to state that there is nothing new that we have been introducing. As it is, we have in this State 5 different Acts to control pests and other diseases. In order to bring about uniformity in the legislation to control all pests this particular Bill has been introduced and I do not think that by trying to bring about uniformity in the legislation we are trying to introduce anything new. For the information of the House I may also tell that similar Act have been passed elsewhere in the country. The Governments of Maharashtra, U. P., M. P., Punjab and Hariyana have passed such Acts in their States and the present Bill before the House is based on the U. P. Act So there need not be any apprehension that we are trying to compel the ryots to do certain things under this Act.

There was a suggestion made that just as medicines are given free to control epidemics of human diseases, similarly in the case of epidemics of pests on crops similar provision should be made in the Act. For the information of the House I would like to state that certain provisions have already been made by Government. For example, this year there was an outbreak of red-haired cater-pillar in about 7 districts. To combat this particular disease we have sanctioned Rs. 5 lakhs and medicines are given free of cost. Similarly there was also a deep pet on ragi crop. For that purpose also we have already sanctioned Rs. 3 lakhs and medicines for this particular crop are also distributed free of cost.

SRI H. SIDDAVEERAPPA.—You heed to the advice at least of a practical farmer like our friend sitting here who has a subsisting interest and who is perhaps the biggest farmer.

SRI D. B. PAWAR.—I am also a farmer.

SRI H. SIDDAVEERAPPA.—You are, but he is a better farmer.

SRI D. B. PAWAR.—As regards the provision for recovery of dues under the Act, the hon'ble member Sri Siddaveerappa said that when medicines are distributed free there is no need to provide for recovery of dues. In the case of epidemics we are distributing medicines to the farmers at 50 per cent subsidy and the farmer is expected to pay 50 per cent of the cost of the medicine–and to that extent this provision will apply. I would like to state for the information of the House that this year we have distributed nearly Rs. 5 lakhs by way of subsidy for all these pesticides and it is our intention to enhance this amount of subsidy to about Rs. 20 lakhs. So I think that the provisions of this Bill are punitive or coercive as stated by some hon'ble members.

Sri K. H. PATIL.—If this is not punitive, can there be anything more stringent punishment than this ?

Sri D. B. PAWAR.—I would like to ask one question. The various Acts on this subject are in operation in various States for the last 30 years. Can any member cite one example where a farmer has been fined or imprisoned for not carrying out the provisions of the Act ?

Sri H. SIDDAVEERAPPA.—Is there any case in which any of these provisions has been used ? Don't try to enrage the farmers by these provisions. It is not right.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ ಗ್ರಾಮಾಂತರ).—ಪೆಸ್ಟಿಸೈಡ್ಸಿಗೆ ಔಷಧಿ ಕೇಳಿದರೆ ಕೊಡಬಹುದು ಆದರೆ ವಿರೋಧ ಪಕ್ಷಕ್ಕೆ ಔಷಧಿ ಬೇಕೆಂದು ಕೇಳಿದರೆ ಅದನ್ನೆಲ್ಲಿಂದ ತಂದು ಕೊಡುವುದು ?

ಶ್ರೀ ಎಚ್. ಸಿದ್ಧವೀರಪ್ಪ.—ನಮಗೂ ಔಷಧಿಯನ್ನು ಕೊಡಬಹುದು, ನಿಮಗೂ ಔಷಧಿಯನ್ನು ಕೊಡಬಹುದು ; ಆದರೆ ನಿಮಗೆ ಫಾಲಿಡಾಲ್ ಕೊಟ್ಟರೆ ಅದೂ ಕೂಡ ಹಿಡಿಯುವುದಿಲ್ಲ.

Sri D. B. PAWAR.—If there are no instances for the last 30 years of farmers being put to inconvenience under the various Acts, I do not think that in future also the provisions of this measure will be implemented in a harsh manner as to cause harassment to the ryots. Government do not think that the various measures here would be adopted by the officers in a severe manner and the officers are likely to take undue advantage of those measures.

The Bill has already been considered in all its aspects by the Joint Select Committee and most of the members who have taken part in the debate were members of the Joint Select Committee. The Joint Select Committee have given due consideration to this Bill and as such I do not think it is necessary again to refer the Bill back to the Joint Select Committee. Hence I commend the motion for the acceptance of the House.

ಶ್ರೀ ಕೆ. ಎಚ್. ಪಾಟೀಲ್.—ಉತ್ತರ ಪ್ರದೇಶದಲ್ಲಿ ಇಂಥ ಒಂದು ಕಾನೂನಿದೆ. ಅದರ ಪ್ರಕಾರ ನಾವು ಇಲ್ಲಿ ಇದನ್ನು ಜಾರಿಗೆ ತರಬೇಕೆಂದಿದ್ದೇವೆ ಎಂದು ಮಂತ್ರಿಗಳು ಅಪ್ಪಣೆ ಕೊಡಿಸಿದರು. ಆದರೆ ಅದರಲ್ಲಿರತಕ್ಕ ಶಿಕ್ಷೆ ವಿಧಿಸಬೇಕೆಂಬ ಕಲಮನ್ನು ನಮ್ಮ ಸರ್ಕಾರದವರು ತೆಗೆಯಕೂಡದು ಎಂದು ಆ ಸರ್ಕಾರಕ್ಕೆ ವಿಧಿಯೇನಾದರೂ ಇದೆಯೇ ? ನಮಗೆ ಅಗತ್ಯವಾದಂತೆ ನಾವಿಲ್ಲಿ ಏಕೆ ಶಾಸನವನ್ನು ಮಾಡಿಕೊಳ್ಳಬಾರದು ? There are only two types of men in this world, one Congressmen and another gentlemen.

Sri D. M. SIDDAIAH.—On a point of order, Sir. The hon'ble member must withdraw his remark. Congressmen are also gentlemen.

6–00 P.M.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಚೀಫ್ ಮಿನಿಸ್ಟರ್‌ರವರು ಇನ್ನೊಮ್ಮೆ ಇದನ್ನು ದಯಮಾಡಿ ವಿಚಾರ ಮಾಡಬೇಕು, ಇಲ್ಲದೇ ಇದ್ದರೆ ಅಧಿಕಾರ ದುರುಪಯೋಗ ಮಾಡಿಕೊಂಡ ಹಾಗಾಗುತ್ತದೆ, ಆ ರೀತಿ ಮಾಡಬಾರದು ಎಂದು ಹೇಳಿ ಈ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ. ಈಗ ಮಾತನಾಡಿದವರ ಪೈಕಿ ಒಬ್ಬ ಸದಸ್ಯರು ಮತ್ತು ಮಾನ್ಯ ಮಂತ್ರಿಗಳು

(ಶ್ರೀ ಕೆ. ಎಚ್. ಪಾಟೀಲ್)

ಇವರಿಬ್ಬರನ್ನು ಬಿಟ್ಟರೆ ಉಳಿದವರೆಲ್ಲರೂ ಈ ಬಿಲ್ಲನ್ನು ವಿರೋಧಿಸಿದ್ದಾರೆ. ಅದ್ದರಿಂದ ತಮಗೆ ಅಧಿಕಾರ ಇದೆ, ಬಹುಮತ ಇದೆ ನಾವು ಏನೇ ಹೇಳಿದರೂ ಇದನ್ನು ಪಾಸ್ ಮಾಡಿಕೊಳ್ಳಬಹುದು, ಆದರೆ ಅನ್ಯಾಯವಾಗದೇ ಇರಲಿ ಅಂತ ಹೇಳಿ ತಮ್ಮನ್ನು ಕೇಳಿಕೊಳ್ಳುತ್ತಾ ಇದ್ದೇನೆ.

Sri D. P. PAWAR.—As I have already said, similar Acts have been there for the last 30 years and I suggest that the Bill as it is may be enacted into an Act. Subsequently, if we find that certain provisions of the Act are coersive, the hon'ble House is at liberty to amend those provisions.

Sri L. SRIKANTIAH.—The Hon'ble the Chief Minister is in the House and he has patiently heard all that was said in the House. I therefore request him to make a statement.

ಶ್ರೀ ಎಸ್. ಶಿವಪ್ಪ.—ಇದರಲ್ಲಿ ನಿಜವಾಗಿಯೂ ಕೂಡ ತೊಂದರೆ ಇದೆ. ರೈತರಿಗೆ ತೊಂದರೆಯಾಗತಕ್ಕ ಕಲಂನ್ನು ಲಿಬರಲೈಸ್ ಮಾಡಿ ಅಥವಾ ಬದಲಾವಣೆ ಮಾಡಿ, ಇಲ್ಲದೇ ಇದ್ದರೆ ತಮ್ಮ ಉದ್ದೇಶ ಏನು ಹೇಳಿದ್ದೀರೋ ಅದನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ವೀರೇಂದ್ರಪಾಟೀಲ್.—ವಿರೋಧಪಕ್ಷದ ನಾಯಕರಿಗೆ ನಾನು ಆಶ್ವಾಸನೆ ಕೊಡುವುದು ಇಷ್ಟೆ, ರೈತರಿಗೆ ಕಷ್ಟ ಕೊಡಬೇಕು, ವಿನಾಕಾರಣ ಹ್ಯಾರ್‍ಯಾಸ್ ಮಾಡಬೇಕು ಎಂಬ ಉದ್ದೇಶದಿಂದ ಇದನ್ನು ತಂದಿದ್ದಲ್ಲ. ರೈತರಿಗೆ ಅನುಕೂಲಮಾಡಬೇಕೆಂಬ ಉದ್ದೇಶದಿಂದಲೇ ತಂದದ್ದಾಗಿದೆ. ಆದ್ದರಿಂದ ರೈತರಿಗೆ ಎಲ್ಲಿ ಅನಾನುಕೂಲವಾಗಿದೆ ಅಂತ ಹೇಳಿ ಸರ್ಕಾರದ ದೃಷ್ಟಿಗೆ, ಗಮನಕ್ಕೆ ಬಂದಾಗ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ, ತಿದ್ದಿಕೊಳ್ಳುವುದಕ್ಕೆ ಸದಾ ಸಿದ್ಧರಾಗಿದ್ದೇವೆ ಎಂದು ಹೇಳಿ ಇಷ್ಟು ಮಾತ್ರ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಈ ಮಸೂದೆ ರೈತರಿಗೆ ಸಂಬಂಧಪಟ್ಟದ್ದು ಮತ್ತು ಎರಡು ಕಡೆಯ ಸದಸ್ಯರೂ ಕೂಡ ಇದರ ಬಗ್ಗೆ ಏನು ತೊಂದರೆಯಾಗುತ್ತದೆ ಎಂಬುದನ್ನು ರೈತರ ಪರವಾಗಿ ಮಾತನಾಡುವ ಜನ ಹೇಳಿದ್ದಾರೆ, ಹೃದಯ ಬಿಚ್ಚಿ ಹೇಳಿದ್ದಾರೆ. ಇವತ್ತು ತಾವು ಯಾವ ಇಜತ್ ಮೇಲೂ ನಿಂತುಕೊಳ್ಳದೆ —ಆತುರ ಆತುರವಾಗಿ ಈ ಮಸೂದೆಯನ್ನು ತಾವು ಪಾಸ್ ಮಾಡಿಕೊಳ್ಳಬಹುದು, ಮೆಜಾರಿಟಿ ಇದೆ, ಕೈ ಎತ್ತಬಹುದು, ಇದನ್ನು ತಾವು ಒಂದು ಸಾಧನೆ ಎಂದು ಭಾವಿಸಬಾರದು, ಏಕೆಂದರೆ ಅನೇಕ ಜನ ಕಾಂಗ್ರೆಸ್‌ನವರೇ ಇದನ್ನು ವಿರೋಧ ಮಾಡಿದ್ದಾರೆ, ರೈತರಾಗಿ, ರೈತರ ಕಷ್ಟಗೊತ್ತಿದ್ದವರು ಅವರು ಆದ್ದರಿಂದ ಸಭೆಗೆ ತಮ್ಮ ಮೂಲಕ ಹೇಳುವುದೇನೆಂದರೆ ಈ ಮಸೂದೆಯನ್ನು ದಯವಿಟ್ಟು ಇವತ್ತು ಆತುರವಾಗಿ ಪಾಸ್ ಮಾಡಬೇಡಿರಿ. ಯೋಚನೆ ಮಾಡಿ, ಬೇಕಾದರೆ ನಾಳೆ ಅಥವಾ ನಾಡಿದ್ದು ಆದರೂ ತೆಗೆದುಕೊಂಡು ಬನ್ನಿ, ಅನೇಕ ಸಬ್‌ಕ್ಲಾಸ್, ಪೀನಲ್ ಕ್ಲಾಸ್ ಇವುಗಳನ್ನು ಅಡ್ವೈಸರಿ ನೇಚರ್ ಆಗಿ ಮಾಡುವುದಕ್ಕೆ ಅವಕಾಶವುಂಟೇ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಇದರಿಂದ ರೈತರಿಗೆ ತೊಂದರೆಯಾಗುವುದು ಬಹಳ ಇದೆ. ಆತುರ ಆತುರವಾಗಿ ಮಾಡುವುದನ್ನು ನಿಲ್ಲಿಸಬೇಕೆಂದು ತಮ್ಮ ಮುಖಾಂತರ ಮಂತ್ರಿಗಳಿಗೆ ಸೂಚನೆ ಮಾಡುತ್ತೇನೆ.

Mr. DEPUTY SPEAKER.—I shall now put Sri Nanje Gowda's amendment to the House. The question is:

> "That the Mysore Agricultural Pests and Diseases Bill, 1967, as reported by the Joint Select Committee, be recommitted to the same Committee."

Those that are in favour of the motion will say "Aye".

Those that are against the motion will say "No". I think the "Noes" have it............

SRI H. SIDDAVEERAPPA.—Sir, I press for a division.

(The Division Bell rang for two minutes)

(The division was taken by requesting the members for and against the Motion to stand in their seats).

MR. DEPUTY SPEAKER.—The result of the division is as follows :-

AYES	...	40
NOES	...	62

The amendment was negatived.

MR. DEPUTY SPEAKER.—The question is :

"That the Mysore Agricultural Pests and Diseases Bill, 1967, as reported by the Joint Select Committee, be taken into consideration."

The motion was adopted.

CLAUSES 2 TO 21.

MR. DEPUTY SPEAKER.—The question is :

"That Clauses 2 to 21, both inclusive, stand part of the Bill."

The motion was adopted.

Clauses 2 to 21, both inclusive were added to the Bill.

CLAUSE 1, Etc.

MR. DEPUTY SPEAKER.—The question is :

"That Clause 1, the Title and the Preamble, stand part of the Bill."

The motion was adopted.

Clause 1, the Title and the Preamble were added to the Bill.

Motion to pass.

SRI D. B. PAWAR (Deputy Minister for Agriculture) :—Sir, I move :

"That the Mysore Agricultural Pests and Diseases Bill, 1967, as reported by the Joint Select Committee, be passed."

Mr. DEPUTY SPEAKER.—The question is :

"That the Mysore Agricultural Pests and Diseases Bill, 1967, as reported by the Joint Select Committee, be passed."

The motion was adopted.

Mr. DEPUTY SPEAKER.—The House now stands adjourned to meet tomorrow at 1-00 P. M.

The House adjourned at Twelve Minutes past Six of the Clock to meet again at One of the Clock on Wednesday the 4th September 1968.